ವಿಜಯಪುರ | ಸಂಪುಟ 04 | ಸಂಚಿಕೆ 142 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ರವಿವಾರ, ಜುಲೈ, 26, 2026



"ಯುವಶಕ್ತಿಯನ್ನು ದೇಶದ ಅಭಿವೃದ್ಧಿ ಕಾರ್ಯಗಳಿಗೆ ಬಳಸಿಕೊಳ್ಳಬೇಕು. ಅವರ ಆಶೋತ್ತರಗಳಿಗೆ ಸ್ಪಂದಿಸಬೇಕು. ಅವರ ಬೇಡಿಕೆಗಳ ಕಡೆಗೆ ಗಮನ ಹರಿಸಬೇಕು. ಹಳೆಯ ಬೇರು ಮತ್ತು ಹೊಸ ಚಿಗುರು ಒಂದಾಗಿ ಮುಂದುವರೆದಾಗ ಮಾತ್ರ ದೇಶದಲ್ಲಿ ಸಮೃದ್ಧಿ ಸಾಧ್ಯ."

■ **ಸುನೀಲಗೌಡ ಪಾಟೀಲ**
ವಿಧಾನ ಪರಿಷತ್ ಸದಸ್ಯರು

**ಶಿಕ್ಷಕರ ಕೊರತೆ ಇರುವ ಸರ್ಕಾರಿ ಶಾಲೆಗಳು | ಕೆಪಿಎಸ್ಸಿ ಅಧ್ಯಕ್ಷರನ್ನು ನೇಮಿಸಿದ್ದೇ ಬಿಜೆಪಿ | ಮಳೆ ಕೊರತೆ ಪ್ರದೇಶಗಳಿಗೆ ಸಿಎಂ ಭೇಟಿ | ಸಿಎಂ ಡಿ.ಕೆ.ಶಿವಕುಮಾರ್ ಸಲಹೆ**

# ಸರ್ಕಾರಿ ಶಾಲೆಗಳನ್ನು ಖಾಸಗಿ ಶಾಲೆಗಳು ದತ್ತು ತೆಗೆದುಕೊಳ್ಳಲಿ

■ ಉದಯರಶ್ಮಿ ದಿನಪತ್ರಿಕೆ

ಚಿತ್ರದುರ್ಗ: "ಶಿಕ್ಷಕರ ಕೊರತೆ ಇರುವ ಸರ್ಕಾರಿ ಶಾಲೆಗಳನ್ನು ನಗರ ಪ್ರದೇಶದ ಅತ್ಯುತ್ತಮ ಖಾಸಗಿ ಶಾಲೆಗಳು ದತ್ತು ಪಡೆದು ಶಿಕ್ಷಕರನ್ನು ನಿಯೋಜಿಸಿ, ತಮ್ಮ ಶಾಲೆಗಳ ಗುಣಮಟ್ಟದ ಶಿಕ್ಷಣವನ್ನು ಗ್ರಾಮೀಣ ಭಾಗದ ಮಕ್ಕಳಿಗೆ ನೀಡಬೇಕು" ಎಂದು ಸಿಎಂ ಡಿ ಕೆ ಶಿವಕುಮಾರ್ ಅವರು ತಿಳಿಸಿದರು.

ಹಿರಿಯೂರಿನ ವೇದಾವತಿ ವಿಜ್ಞಾನ ಕಾಲೇಜು ಕ್ರೀಡಾಂಗಣದಲ್ಲಿ ಮಾಧ್ಯಮಗಳ ಪ್ರಶ್ನೆಗಳಿಗೆ ಶಿವಕುಮಾರ್ ಅವರು ಶನಿವಾರ ಪ್ರತಿಕ್ರಿಯೆ ನೀಡಿದರು.

ಸರ್ಕಾರಿ ಶಾಲೆಗಳನ್ನು ಖಾಸಗಿ ಶಾಲೆಗಳು ದತ್ತು ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ಆಕ್ಷೇಪ ವ್ಯಕ್ತವಾಗಿರುವ ಬಗ್ಗೆ ಕೇಳಿದಾಗ, "ಖಾಸಗಿ ಶಾಲೆಗಳು ಇದರ ಬಗ್ಗೆ ನನ್ನ ಬಳಿ ಹೇಳಲಿ ಆ ನಂತರ ನಾನು ಪ್ರತಿಕ್ರಿಯೆ ನೀಡುತ್ತೇನೆ. ಇದು ನನಗೂ ಅವರಿಗೂ ಇರುವ ಒಪ್ಪಂದ. ಖಾಸಗಿ ಶಾಲೆಗಳು ಎಂದರೆ ಎಲ್ಲಾ ಶಾಲೆಗಳು ದತ್ತು ತೆಗೆದುಕೊಳ್ಳುವುದಲ್ಲ. ಇದಕ್ಕೆ ಕೆಲವು ಮಾನದಂಡಗಳಿವೆ. ಅತ್ಯುತ್ತಮ ಶಾಲೆಗಳು ಗ್ರಾಮೀಣ ಭಾಗದ ಶಾಲೆಗಳನ್ನು ತಮ್ಮ ಶಾಲೆಗಳ ಮಟ್ಟಕ್ಕೆ ಕೊಂಡೊಯ್ಯಲು ದತ್ತು ತೆಗೆದುಕೊಳ್ಳುವುದು. ಸಿಎಸ್ ಆರ್ ಹಣವನ್ನು ಹೀಗೆ ಖರ್ಚು ಮಾಡಿದರೆ ಪ್ರಾಥಮಿಕ ಶಿಕ್ಷಣ ಬಲಗೊಳ್ಳುತ್ತದೆ. ಹಳ್ಳಿ ಮಕ್ಕಳು ನಗರಗಳಿಗೆ ಶಿಕ್ಷಣಕ್ಕಾಗಿ ವಲಸೆ ಬರುವುದು ತಪ್ಪಬೇಕು. ಅವರಿಗೂ ಬೆಂಗಳೂರು ಮಟ್ಟದ ಶಿಕ್ಷಣ ದೊರೆಯಬೇಕು ಎಂಬುದು ನನ್ನ ಅಭಿಲಾಷೆ. ಸರ್ಕಾರ 1.40 ಲಕ್ಷ ರೂಪಾಯಿಯನ್ನು ಒಂದು ಮಗುವಿನ ಮೇಲೆ ಖರ್ಚು ಮಾಡುತ್ತಿದೆ. ಆದರೂ ಸಹ ಗುಣಮಟ್ಟದ ಶಿಕ್ಷಣ ನೀಡಲು ತೊಡಕಾಗುತ್ತಿದೆ. ಅದಕ್ಕಾಗಿ ನಾನು ಖಾಸಗಿ ಅವರ ಬಳಿ ಮಾತುಕತೆ ನಡೆಸಿದ್ದೇನೆ" ಎಂದು ತಿಳಿಸಿದರು.



## ಮಳೆ ಕೊರತೆ ಪ್ರದೇಶಗಳಿಗೆ ಭೇಟಿ :ಪರಿಶೀಲನೆ



"ಬೆಂಗಳೂರಿನಲ್ಲಿ ಬರ ಪರಿಸ್ಥಿತಿ ಹಾಗೂ ಪ್ರಗತಿ ಪರಿಶೀಲನೆ ಮಾಡುವ ಬದಲು, ಚಿತ್ರದುರ್ಗದಲ್ಲಿ ನಡೆಸೋಣ ಎಂದು ಬಂದಿದ್ದೇನೆ. ಈಗಾಗಲೇ ಜಿಲ್ಲಾಧಿಕಾರಿಗಳು ಹಾಗೂ ಸಿಇಓಗಳ ಸಭೆಯನ್ನು ಈಗಾಗಲೇ ನಡೆಸಿದ್ದೇನೆ. ಈಗ ತುಮಕೂರು, ಶಿವಮೊಗ್ಗ, ಚಿತ್ರದುರ್ಗ, ದಾವಣಗೆರೆ ಭಾಗಗಳಿಗೆ ಅನುಕೂಲವಾಗಲಿದೆ. ಆದ ಕಾರಣ ಸಭೆ ನಡೆಸುತ್ತಿದ್ದೇನೆ. ಇಂದು ಕೆಲವು ಪ್ರದೇಶಗಳಿಗೆ ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸುತ್ತೇನೆ" ಎಂದು ಸಿಎಂ ಡಿ.ಕೆ ಶಿವಕುಮಾರ್ ತಿಳಿಸಿದರು.

"ಬೆಳಗಾವಿಯಲ್ಲಿ ನಡೆದ ಪ್ರಗತಿ ಪರಿಶೀಲನೆ ಸಭೆ ವೇಳೆ ಯಾವುದೇ ಕಾರಣಕ್ಕೂ ಕುಡಿಯುವ ನೀರಿಗೆ ತೊಂದರೆಯಾಗಬಾರದು ಎಂದು ತೀರ್ಮಾನ ಮಾಡಿದ್ದೇವೆ. ಆಲಮಟ್ಟಿ ಅಣೆಕಟ್ಟು ಹೊರತಾಗಿ ರಾಜ್ಯದ ಬೇರೆ ಯಾವ ಭಾಗದಲ್ಲೂ ಉತ್ತಮ ಮಳೆ ಇಲ್ಲ. ರಾಜ್ಯದಲ್ಲಿ ಬರ ಇನ್ನೂ ಹೆಚ್ಚಾಗುತ್ತಲೇ ಇದೆ. ಬರ ಪರಿಸ್ಥಿತಿ ಬಗ್ಗೆ ಅಧಿಕಾರಿಗಳು ಈಗಾಗಲೇ ಮಾಹಿತಿ ಪಡೆದುಕೊಂಡಿದ್ದು, ಅವರ ಜೊತೆ ಜನಪ್ರತಿನಿಧಿಗಳೊಂದಿಗೆ ಚರ್ಚೆ ನಡೆಸುತ್ತೇನೆ ಎಂದು ಸಿಎಂ ಹೇಳಿದರು.

## ಯಾರಿಗೂ ತೊಂದರೆ ನೀಡುವುದಿಲ್ಲ :ಸಿಎಂ

ಬಿಡದಿ ರೈತರ ವಿರುದ್ಧದ ಪ್ರಕರಣ ಹಿಂಪಡೆಯುತ್ತೀರಾ ಎಂದು ಕೇಳಿದಾಗ ಸಿಎಂ ಡಿ.ಕೆ.ಶಿವಕುಮಾರ್ ಅವರು, "ಅವರೆಲ್ಲರೂ ನಮ್ಮ ರೈತರೇ. ನಾವು ಯಾರ ಮೇಲೂ ಒತ್ತಡ ಹಾಕುವುದಿಲ್ಲ, ತೊಂದರೆ ನೀಡುವುದಿಲ್ಲ ಎಂದು ಹೇಳಿದ್ದೇನೆ. ಅವರು ನಮ್ಮ ಜನ. ಅವರನ್ನು ಬಿಟ್ಟು ನಾವು, ನಮ್ಮನ್ನು ಬಿಟ್ಟು ಅವರು ಬದುಕಲು ಸಾಧ್ಯವಿಲ್ಲ. ನಾವು ತೀರ್ಮಾನ ಮಾಡುತ್ತೇವೆ" ಎಂದು ತಿಳಿಸಿದರು.


## ಕೆಪಿಎಸ್ ಸಿ ಅಧ್ಯಕ್ಷರನ್ನು ನೇಮಿಸಿದ್ದೇ ಬಿಜೆಪಿ

ಬಿಜೆಪಿಯವರು ಕಾಂಗ್ರೆಸ್ ಕಚೇರಿಗಳ ಮುಂದೆ ಪ್ರತಿಭಟನೆ ನಡೆಸುತ್ತಿರುವ ಬಗ್ಗೆ ಕೇಳಿದಾಗ, "ಬಿಜೆಪಿಯವರಿಗೆ ಅವಮಾನ ತಡೆಯಲು ಆಗುತ್ತಿಲ್ಲ. ಪ್ರಧಾನಮಂತ್ರಿಯವರು ಈಗ ಕಣ್ತೆರೆದಿದ್ದಾರೆ. ನಾವು ಸಂಸತ್ತಿನಲ್ಲಿ ಚರ್ಚೆ ಮಾಡಿ ಎಂದು ಆಗ್ರಹಿಸಿದ್ದೇವೆ. ವಿದ್ಯಾರ್ಥಿಗಳ ಮೇಲೆ ಪ್ರಕರಣ ವಾಪಸ್ ಪಡೆಯಬೇಕು. ಶಿಕ್ಷಣ ಸಚಿವರು ರಾಜಿನಾಮೆ ನೀಡಬೇಕು ಎಂದು ಆಗ್ರಹಿಸಿದ್ದೇವೆ. ಮಕ್ಕಳಿಗೆ ಏಟು ನೀಡಿದ ಬಿಜೆಪಿಯವರ ಮೇಲೆ ಇಡೀ ಸಮೂಹ ದೇಶದಾದ್ಯಂತ ದಂಗೆ ಎದ್ದಿದೆ. ಅದನ್ನ ನೋಡಿ ತಡೆದುಕೊಳ್ಳಲು ಅವರಿಗೆ ಆಗುತ್ತಿಲ್ಲ. ಅದಕ್ಕೆ ಹೀಗೆ ಮಾಡುತ್ತಿದ್ದಾರೆ" ಎಂದರು.

"ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಭಟನೆ ಮಾಡುವುದನ್ನು ಬೇಡ ಎಂದು ಹೇಳಲು ಆಗುತ್ತದೆಯೇ? ನನ್ನ ವಿರುದ್ಧ ಪ್ರತಿಭಟನೆ ಮಾಡುವವರನ್ನು ನಾನು ಬೇಡ ಎನ್ನಲು ಸಾಧ್ಯವೇ? ಮಾಧ್ಯಮದವರೂ ಪ್ರತಿಭಟನೆ ಮಾಡುತ್ತಾರೆ. ಇದನ್ನು ಬೇಡ ಎನ್ನಲು ಆಗುತ್ತದೆಯೇ? ಕೆಪಿಎಸ್ ಸಿ ಅಧ್ಯಕ್ಷನನ್ನ ನಾವು ಮಾಡಿದ್ದಲ್ಲ. ಬಿಜೆಪಿಯವರೇ ಆಯ್ಕೆ ಮಾಡಿದ್ದು. ಈಗ ಅವರೇ ಸಿಲುಕಿಕೊಂಡಿದ್ದಾರೆ. ಅದಕ್ಕೆ ಅವರೇ ಮುಂಚಿತವಾಗಿ ಪತ್ರ ಬರೆದು ವಜಾ ಮಾಡಬೇಕು ಎಂದಿದ್ದಾರೆ. ರಾಜ್ಯಪಾಲರು ಕಳಿಸಿದ್ದನ್ನು ನಾವು ಅಂಗೀಕಾರ ಮಾಡಿದ್ದೇವೆ. ತನಿಖೆ ನಡೆಸುತ್ತೇವೆ. ಕಾನೂನು ಕ್ರಮ ಕೈಗೊಳ್ಳುತ್ತೇವೆ" ಎಂದು ಸ್ಪಷ್ಟಪಡಿಸಿದರು.

# ಸಿ.ಟಿ.ರವಿ ಹೇಳಿಕೆ ಖಂಡಿಸಿ ಮುಲ್ಲಾ ಸಮುದಾಯದಿಂದ ಮನವಿ

■ ಉದಯರಶ್ಮಿ ದಿನಪತ್ರಿಕೆ



ಸಿಂದಗಿ: ಮುಲ್ಲಾನಿಗೂ ನೀಟ್‌ಗೂ ಏನು ಸಂಬಂಧ? ಎದೆ ಸಿಳಿದರೆ ಮೂರು ಅಕ್ಷರವಿಲ್ಲ ಎಂದು ಮುಲ್ಲಾ ಸಮುದಾಯಕ್ಕೆ ನೀಡಲಾಗಿದೆ ಎನ್ನಲಾದ ಹೇಳಿಕೆ ಖಂಡಿಸಿ ಹಾಗೂ ಸಮುದಾಯದ ಗೌರವ ಮತ್ತು ಸಾಮಾಜಿಕ ಗುರುತಿನ ಸಂರಕ್ಷಣೆಗೆ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಮುಲ್ಲಾ ಸಮುದಾಯ ಬಂದುಗಳು ತಹಶೀಲ್ದಾರ ಕರೆಪ್ಪ ಬೆಳ್ಳಿ ಮೂಲಕ ಮುಖ್ಯಮಂತ್ರಿಗಳಿಗೆ ಹಾಗೂ ಗೃಹಸಚಿವರಿಗೆ ಮನವಿ ಸಲ್ಲಿಸಿದರು.

ಈ ವೇಳೆ ಕರ್ನಾಟಕ ಮುಸ್ಲಿಂ ಹಿತ ರಕ್ಷಣಾ ವೇದಿಕೆ ರಾಜ್ಯ ಅಧ್ಯಕ್ಷ ಎಂ.ಎ.ಖತೀಬ ಮಾತನಾಡಿ, ಇತ್ತೀಚೆಗೆ ಬಿಜೆಪಿ ಮುಖಂಡ ಸಿ.ಟಿ.ರವಿ ಅವರು ಮುಲ್ಲಾನಿಗೂ ನೀಟ್‌ಗೂ ಏನು ಸಂಬಂಧದ. ಎದೆ ಸಿಳಿದರೆ ಮೂರು ಅಕ್ಷರವಿಲ್ಲ. ವಿನಾಃಕಾರಣ ಮಾತನಾಡೋಕೆ ಬಂದಿದ್ದಾರೆ. ಸಾರ್ವಜನಿಕವಾಗಿ ಮಾತನಾಡಿದ್ದು ಮುಲ್ಲಾ ಸಮುದಾಯಕ್ಕೆ ನೋವುಂಟು ಮಾಡಿದೆ. ನಾವೇನು ಭಾರತೀಯರಲ್ಲವೇ, ಬಿಜೆಪಿಯವರು ಸಮುದಾಯ ಸಮುದಾಯಗಳ ನಡುವೆ ಕಂದಕ ಸೃಷ್ಟಿ ಮಾಡಿ ಹಿಂದೂ ಮುಸ್ಲಿಂರಲ್ಲಿ ದ್ವೇಶ ಹುಟ್ಟು ಹಾಕುತ್ತಿದ್ದಾರೆ. ಇವರ ತಲೆಯಲ್ಲಿ ಹಿಂದೂ ಮುಸ್ಲಿಂರಲ್ಲಿ ಜಗಳ ಹಚ್ಚಿ ಹಿಂದೂ ಮತ ಬ್ಯಾಂಕ ಮಾಡುವ ಹುನ್ನಾರು ನಡೆಸಿದ್ದಾರೆ. ವಿನಾಃಕಾರಣ ಇಲ್ಲಸಲ್ಲದ ಹೇಳಿಕೆಗಳನ್ನು ನೀಡಿ ಗೊಂದಲ ಸೃಷ್ಟಿಸುವುದನ್ನು ಕೈಬಿಟ್ಟು ಸಾರ್ವಜನಿಕ ಬೆಳವಣಿಗೆ ಮಾಡಬಹುದಾದ ಹೇಳಿಕೆಗಳನ್ನು ನೀಡಿ ಇಲ್ಲದಿದ್ದರೆ ಮುಂದಾಗುವು ಅನಾಹುತಗಳಿಗೆ ನಿಮ್ಮನ್ನೆ ಹೊಣೆಗಾರರನ್ನು ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಇದೇ ಸಂದರ್ಭದಲ್ಲಿ ಕೆಎಂಎ ತಾಲೂಕಾಧ್ಯಕ್ಷ ಡಾ.ಅಬೂಬಕರ್ ಮುಲ್ಲಾ ಮಾತನಾಡಿದರು.

ಈ ವೇಳೆ ಉಪಾಧ್ಯಕ್ಷ ಮುನವಾರ ಮುಲ್ಲಾ, ಅಬ್ದುಲ್ ಮುಲ್ಲಾ, ಮೊಹಮದ್ ಹನೀಫ್ ಮುಲ್ಲಾ, ರಫೀಕ್ ಮುಲ್ಲಾ, ಕೆ.ಡಿ.ಮುಲ್ಲಾ, ಅಬು ಖತೀಬ, ಶಫಿಕ್ ಮುಲ್ಲಾ, ಮೌಲಾನ್ ಅಶ್ಪಾಕ ಕರಜಗಿ ಸೇರಿದಂತೆ ಮುಲ್ಲಾ ಪದಾಧಿಕಾರಿಗಳು, ಮುಸ್ಲಿಂ ಹಿತ ರಕ್ಷಣೆ ಪದಾಧಿಕಾರಿಗಳು ಇದ್ದರು.

**ಕೆಸರಟ್ಟಿ - ಕಲಕೇರಿ ಮಾರ್ಗದ ಹದಗೆಟ್ಟಿರುವ ರಸ್ತೆ ದುರಸ್ಥಿಗೆ ಆಗ್ರಹಿಸಿ ನಡೆದ ಧರಣಿ। ಸ್ಥಳಕ್ಕೆ ಭೇಟಿ ನೀಡಿದ ಶಾಸಕ ರಾಜುಗೌಡರಿಗೆ ಧರಣಿ ನಿರತರಿಂದ ಮನವಿ**

# ಶಾಸಕರ ಭರವಸೆ ಮೇರೆಗೆ ಧರಣಿ ಸತ್ಯಾಗ್ರಹ ಅಂತ್ಯ

■ ಉದಯರಶ್ಮಿ ದಿನಪತ್ರಿಕೆ



ತಾಳಿಕೋಟೆ: ತಾಲೂಕಿನ ಕೆಸರಟ್ಟಿ ಕ್ರಾಸ್‌ದಿಂದ ಬಿಂಜಲಭಾವಿ ಮಾರ್ಗವಾಗಿ ಕಲಕೇರಿ ಸಂಪರ್ಕಿಸುವ ಮುಖ್ಯ ರಸ್ತೆಯು ಸಂಪೂರ್ಣ ಹಾಳಾಗಿ ಹೋಗಿದ್ದು ಕೂಡಲೇ ನೂತನ ರಸ್ತೆ ನಿರ್ಮಿಸಬೇಕೆಂದು ರಾಷ್ಟ್ರೀಯ ರೈತ ಸಂಘ ಜಿಲ್ಲಾ ಹಾಗೂ ತಾಲೂಕಾ ಮತ್ತು ಗ್ರಾಮ ಘಟಕದ ನೇತೃತ್ವದಲ್ಲಿ ಕಳೆದ 3 ದಿನಗಳಿಂದ ಬಿಂಜಲಭಾವಿ ಗ್ರಾಮದ ಹತ್ತಿರ ನಡೆದ ಧರಣಿ ಸತ್ಯಾಗ್ರಹವು ಶಾಸಕ ರಾಜುಗೌಡ ಪಾಟೀಲ(ಕು.ಸಾಲವಾಡಗಿ) ಅವರ ಬರವಸೆಯ ಮೇರೆಗೆ ಅಂತ್ಯಗೊಂಡಿದೆ.

ಶುಕ್ರವಾರರಂದು ಧರಣಿ ನಿರತರ ಸ್ಥಳಕ್ಕೆ ಬೆಟ್ಟಿನೀಡಿದ ದೇವರ ಹಿಪ್ಪರಗಿ ಮತಕ್ಷೇತ್ರದ ಶಾಸಕ ರಾಜುಗೌಡ ಪಾಟೀಲ ಅವರು ಮಾತನಾಡಿ, ಸದರಿ ರಸ್ತೆ ದುರಸ್ಥಿಗಾಗಿ 2024 ನವ್ಹೆಂಬರ್‌ನಲ್ಲಿ 5 ಕೋಟಿ ರೂ. ಲೋಕೋಪಯೋಗಿ ಇಲಾಖೆಯಡಿ ಹಾಕಲಾಗಿತ್ತು ಯಾವುದೋ ಕಾರಣಕ್ಕೆ ಕೆಲವರ ಸ್ವಹಿತಾಸಕ್ತಿಗೆ ಸದರಿ ಕೆಲಸವು ಪ್ರಾರಂಭಗೊಳ್ಳದೇ ರದ್ದುಗೊಂಡಿತು. ಸದರಿ ರಸ್ತೆಗೆ ದುರಸ್ಥಿಗೆ ಬಂದ ಅನುದಾನ ಬೇರೆಡೆ ಹೋಯಿತು. ಈಗ ರಸ್ತೆ ದುರಸ್ಥಿಗೆ ಎಲ್ಲರ ಅಪೇಕ್ಷೆಯಂತೆ ಕೂಡಲೇ ತಾತ್ಕಾಲಿಕವಾಗಿ ಗರ್ಸು ಮಿಶ್ರೀಮ ಮರ್ಮು ರಸ್ತೆಯನ್ನು ಮಾಡಿಕೊಡಿಕೊಡಲು ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಈ ರಸ್ತೆ ಡಾಂಬರಿಕರಣ ಮಾಡುವದಕ್ಕಾಗಿ ಅನುದಾನಕ್ಕಾಗಿ ಸರ್ಕಾರ ಮಟ್ಟದಲ್ಲಿ ಪ್ರಸ್ತಾವನೆ ಸಲ್ಲಿಸಿದ್ದೇನೆ. ಆದಷ್ಟು ಬೇಗನೇ ಸರ್ಕಾರದಿಂದ ಮಂಜೂರಾತಿ ದೊರೆತ ತಕ್ಷಣವೇ ಢಾಂಬರಿಕರಣ ಮಾಡಿಕೊಡಲಾಗುವದೆಂದು ಧರಣಿ ನಿರತರಿಗೆ ಭರವಸೆ ನೀಡಿದರು. ಶಾಸಕ ರಾಜುಗೌಡ ಪಾಟೀಲ ಅವರ ಭರವಸೆಯ ಮೇರೆಗೆ ಧರಣಿ ನಿರತರು ಆದಷ್ಟು ಬೇಗನೇ ರಸ್ತೆ ಕಾಮಗಾರಿ ಮಾಡಿಕೊಟ್ಟರೆ ರೈತಾಪಿ ಜನತೆಗೆ ಹಾಗೂ ವಾಹನ ಸವಾರರಿಗೆ ಅನುಕೂಲವಾಗಲಿದೆ ಎಂದರಲ್ಲದೇ, ಕೂಡಲೇ ರಸ್ತೆ ದುರಸ್ಥಿಗೆ ಗರ್ಸು ಮರ್ಮು ಕೆಲಸಕ್ಕೆ ಕ್ರಮಕೈಗೊಂಡಿದ್ದಕ್ಕೆ ಸ್ವಾಗತಿಸಿದರಲ್ಲದೇ ಧರಣಿ ಸತ್ಯಾಗ್ರಹವನ್ನು ಹಿಂಪಡೆದುಕೊಳ್ಳುವದಾಗಿ ತಿಳಿಸಿದರು. ರಾಷ್ಟ್ರೀಯ ರೈತ ಸಂಘದ ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಹಣಮಂತ ವಡ್ಡರ ಅವರು ಕೂಡಲೇ ರಸ್ತೆ ದುರಸ್ಥಿ ಮಾಡಿಕೊಡಬೇಕೆಂದು ಶಾಸಕ ರಾಜುಗೌಡ ಅವರಿಗೆ ಮನವಿ ಸಲ್ಲಿಸಿದರು.

ಈ ಸಮಯದಲ್ಲಿ ತಹಶಿಲ್ದಾರ ಶ್ರೀಮತಿ ಡಾ.ವಿನಯಾ ಹೂಗಾರ, ಪಿಡಬ್ಲುಡಿ ಅಧಿಕಾರಿ ಅರುಣಕುಮಾರ, ಜೆಡಿಎಸ್ ತಾಲೂಕಾ ಅಧ್ಯಕ್ಷ ಮಡುಸಾಹುಕಾರ ಬಿರಾದಾರ, ಜಿಲ್ಲಾ ಉಪಾಧ್ಯಕ್ಷ ಮೈಹಿಬೂಬಾಷಾ ಮನಗೂಳಿ, ರಾಜ್ಯ ಮಹಿಳಾ ಪ್ರಧಾನ ಕಾರ್ಯದರ್ಶಿ ರೇಣುಕಾ ಪಾಟೀಲ, ತಾಲೂಕಾ ಅಧ್ಯಕ್ಷ ಅಶೋಕಗೌಡ ಪಾಟೀಲ, ತಾಲೂಕಾ ಯುವ ಮೂರ್ಚಾ ಅಧ್ಯಕ್ಷ ಗೌಡಪ್ಪಗೌಡ ಹಳಿಮನಿ ಅಸ್ಕಿ, ತಾಲೂಕಾ ಪ್ರಧಾನ ಕಾರ್ಯದರ್ಶಿ ಶರಣು ಕೌದಿ, ಗ್ರಾಮ ಘಟಕದ ಅಧ್ಯಕ್ಷ ವಿಜಯಕುಮಾರ ಉಕ್ಕಲಿ, ಕೆಸರಟ್ಟಿ ಗ್ರಾಮದ ಮುಖಂಡರಾದ ರಾಮನಗೌಡ ಪಾಟೀಲ, ಬಸನಗೌಡ ಬಿರಾದಾರ, ಗುರುನಾಥಗೌಡ ಪಾಟೀಲ, ಬಿಂಜಲಭಾವಿ ಗ್ರಾಮದ ಮುಖಂಡರುಗಳಾದ ಸಿದ್ದಣ್ಣ ಅಸ್ಕಿ, ಮಲಕನಗೌಡ ಬಿರಾದಾರ, ಸಾಯಬಣ್ಣ ಉಕ್ಕಲಿ, ಬಸಯ್ಯ ಹಿರೇಮಠ, ಶಾಂತಗೌಡ ಬಿರಾದಾರ, ಮಹ್ಮದಲಿ ಮಕಾಂದಾರ, ಚನ್ನಾರೆಡ್ಡಿಗೌಡ ಬಿರಾದಾರ, ಒಳಗೊಂಡು ಮೊದಲಾದವರು ಉಪಸ್ಥಿತರಿದ್ದರು.



**ಬಿಜೆಪಿ ನಾಯಕ ಬಸನಗೌಡ ಪಾಟೀಲ(ಯಡಿಯಾಪೂರ) ರ ಸಾಮಾಜಿಕ ಕಳಕಳಿಗೆ ರೈತರ ಮೆಚ್ಚುಗೆ :ಸನ್ಮಾನ**

# ರಸ್ತೆ ದುರಸ್ತಿ ಮಾಡಿಸಿ ರೈತರ ಸಂಕಷ್ಟಕ್ಕೆ ಸ್ಪಂದಿಸಿದ ಬಸನಗೌಡ

■ ಉದಯರಶ್ಮಿ ದಿನಪತ್ರಿಕೆ

ತಾಳಿಕೋಟೆ: ದೇವರ ಹಿಪ್ಪರಗಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪಡಗಾನೂರಿನಿಂದ ಇಂಗಳಗಿಗೆ ಸಂಪರ್ಕಿಸುವ 20-30 ವರ್ಷದ ಹಳೆ ರಸ್ತೆ ಸಂಪೂರ್ಣವಾಗಿ ಮುಳ್ಳು-ಕಂಟಿಗಳಿಂದ ಸಂಪೂರ್ಣ ಮುಚ್ಚಿಹೋಗಿದ್ದ ರಸ್ತೆಯನ್ನು ರೈತಾಪಿ ಜನರ ವಿನಂತಿಯ ಮೇರೆಗೆ ಮತಕ್ಷೇತ್ರದ ಬಿಜೆಪಿ ನಾಯಕ ಬಸನಗೌಡ ಪಾಟೀಲ(ಯಡಿಯಾಪೂರ) ಅವರು ಮುಳ್ಳುಕಂಠಿ ಕಡಿಸುವದರೊಂದಿಗೆ ಗರಸು ಮಣ್ಣು ಹಾಕಿಸಿ ರಸ್ತೆ ದುರಸ್ಥಿ ಮಾಡಿಸಿ ರೈತಾಪಿ ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಈ ರಸ್ತೆಯಲ್ಲಿ ಮುಳ್ಳು ಕಂಠಿ-ತಗ್ಗು ದಿನ್ನಿಗಳು ತುಂಬಿಕೊಂಡ ಪರಿಣಾಮವಾಗಿ ಯಾವುದೇ ವಾಹನಗಳ ಸಂಚಾರ ಮಾತ್ರವಲ್ಲದೆ ಕಾಲ್ನಡಿಗೆಯಲ್ಲಿಯೂ ತೆರಳುವುದು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿತ್ತು. ಪ್ರತಿನಿತ್ಯ ಈ ರಸ್ತೆಯ ಮೂಲಕ ತಮ್ಮ ಜಮೀನುಗಳಿಗೆ ತೆರಳುವ ರೈತರು ಮತ್ತು ಸಾರ್ವಜನಿಕರು ತೀವ್ರ ಸಂಕಷ್ಟ ಅನುಭವಿಸುತ್ತಿದ್ದರು.

ಈ ಸಮಸ್ಯೆಯನ್ನು ಅಲ್ಲಿನ ರೈತ ಬಾಂಧವರು ಬಿಜೆಪಿ ಮುಖಂಡ ಬಸನಗೌಡ ಪಾಟೀಲ(ಯಡಿಯಾಪೂರ) ಅವರ ಗಮನಕ್ಕೆ ತರುವದರೊಂದಿಗೆ ರಸ್ತೆ ದುರಸ್ಥಿಯ ಸಾಮಾಜಿಕ ಸೇವೆ ಸಲ್ಲಿಸಬೇಕೆಂಬ ಮನವಿಯ ಮೇರೆಗೆ ಸ್ಥಳಕ್ಕೆ ಭೇಟಿ ನೀಡಿದ ಬಸನಗೌಡ ಪಾಟೀಲ ಯಡಿಯಾಪೂರ ಅವರು ರೈತರ ಕಷ್ಟವನ್ನು ಮನಗಂಡು ವಿಳಂಬ ಮಾಡದೆ ಸ್ವಂತ ಖರ್ಚಿನಲ್ಲಿ ಸುಮಾರು 1.50 ಕಿ.ಮೀ. ರಸ್ತೆಯನ್ನು ಜೆಸಿಬಿ ಯಂತ್ರದ ಮೂಲಕ ಸ್ವಚ್ಛಗೊಳಿಸಿ, ಮಣ್ಣು, ಕಲ್ಲು ಹಾಗೂ ಗರಸು ಹಾಕಿಸಿ ಸಂಚಾರಕ್ಕೆ ಮುಕ್ತಗೊಳಿಸಿದ್ದಾರೆ.

ಈ ಕಾರ್ಯದಿಂದ ಸಂತಸಗೊಂಡಿರುವ ಈ ರಸ್ತೆಯನ್ನು ಬಳಸುವ ರೈತರಾದ ಬಸಂತರಾಯ ಕೊಣ್ಣೂರ, ಶಿವಾನಂದ ಕೊಣ್ಣೂರ, ಮಲ್ಲಣ್ಣ ಕೊಣ್ಣೂರ, ಸಿದ್ದು ಹುಗ್ಗಿ, ಮಾತಾಬಸಾಬ ಮುಜಾವರ, ಸಿದ್ದನಗೌಡ ಕೊಣ್ಣೂರ, ಸುರೇಶ್ ಕೊಣ್ಣೂರ, ಶ್ರೀಶೈಲ ಕೊಣ್ಣೂರ, ರಾಮನಗೌಡ ಕೊಣ್ಣೂರ, ಶಂಕರಗೌಡ ಕೊಣ್ಣೂರ, ಭೀಮನಗೌಡ ಕೊಣ್ಣೂರ ಸೇರಿದಂತೆ ಸುತ್ತಮುತ್ತಲಿನ ರೈತ ಬಾಂದವರು ಬಸನಗೌಡ ಪಾಟೀಲ(ಯಡಿಯಾಪೂರ) ಅವರನ್ನು ಸನ್ಮಾನಿಸಿ ಗೌರವಿಸಿದ್ದಾರೆ.

# ರಾಷ್ಟ್ರಧ್ವಜ ದೇಶದ ಏಕತೆ ಮತ್ತು ಸಾವಭೌಮತ್ವದ ಪ್ರತೀಕ

■ ಉದಯರಶ್ಮಿ ದಿನಪತ್ರಿಕೆ



ಇಂಡಿ: ರಾಷ್ಟ್ರಧ್ವಜವು ದೇಶದ ಸ್ವಾತಂತ್ರ, ಏಕತೆ ಮತ್ತು ಸಾವಭೌಮತ್ವದ ಪ್ರತೀಕವಾಗಿದ್ದು, ಪ್ರತಿಯೊಬ್ಬ ನಾಗರಿಕರು ಅದರ ಘನತೆ ಮತ್ತು ಗೌರವವನ್ನು ಕಾಪಾಡುವುದು ತಮ್ಮ ಕತ9ವ್ಯ ಎಂದು ಎಸ್,ವಾಯ್ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಡಿ.-ಎಸ್, ಕುಲಕರ್ಣಿ ಹೇಳಿದರು.

ಭಾರತ ಸೇವಾದಳ ಜಿಲ್ಲಾ ಸಮಿತಿ ವಿಜಯಪುರ, ತಾಲೂಕು ಸಮಿತಿ ಇಂಡಿ, ಶಾಲಾ ಶಿಕ್ಷಣ ಇಲಾಖೆ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಇಂಡಿ ಇವರುಗಳ ಸಹಯೋಗದಲ್ಲಿ ತಾಲೂಕಿನ ಮಿರಗಿ ಗ್ರಾಮದ ಶ್ರೀ ಯಲ್ಲಾಲಿಂಗೇಶ್ವರ ಪ್ರೌಢಶಾಲೆಯಲ್ಲಿ ಶಿಕ್ಷಕರಿಗಾಗಿ, ಮಕ್ಕಳಿಗಾಗಿ ಆಯೋಜಿಸಲಾದ "ರಾಷ್ಟ್ರೀಯ ಭಾವೈಕ್ಯತೆ, ರಾಷ್ಟ್ರಧ್ವಜ ಹಾಗೂ ರಾಷ್ಟ್ರಗೀತೆ ಕುರಿತಾದ ಮಾಹಿತಿಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಮಾತನಾಡಿದರು.ಭಾರತ ಸೇವಾದಳ ವಲಯ ಸಂಘಟಕ ನಾಗೇಶ ಡೋಣೂರ ರಾಷ್ಟ್ರಧ್ವಜ, ರಾಷ್ಟ್ರಗೀತೆ ಕುರಿತು ಬೌದ್ಧಿಕವಾಗಿ ಮಾಹಿತಿ ನೀಡಿದರು. ಹಾಗೇ ರಾಷ್ಟ್ರಧ್ವಜ ಕಟ್ಟುವ, ಮಡಚುವ, ಹಾರಿಸುವ ವಿಧಾನವನ್ನು ಪ್ರಾಯೋಗಿಕವಾಗಿ. ಎಲ್ಲಾ ಶಿಕ್ಷಕರಿಗೂ, ಮಕ್ಕಳಿಗೂ ತಿಳಿಸಿದರು. ಶಿಕ್ಷಕ ವೈ.ಜಿ. ಬಿರಾದಾರ ಮಾತನಾಡಿದರು.ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಕ ವೃಂದ ಹಾಗೂ ಮಕ್ಕಳು ಉಪಸ್ಥಿತರಿದ್ದರು. ಶಿಕ್ಷಕ ಮಾಣಿಕ್ ನಿಂಬಾಳ್ಕರ್ ಕಾರ್ಯಕ್ರಮ ನಿರೂಪಿಸಿದರು, ಶಿಕ್ಷಕ ಜೆ.ಸಿ ಗಬಸಾವಳಗಿ ಸ್ವಾಗತಿಸಿದರು, ಶಿಕ್ಷಕಿ ನಂದಾ ಚೌವ್ಹಾಣ್ ವಂದಿಸಿದರು.

### ನೀಟ್ ಪರೀಕ್ಷೆಯಲ್ಲಿ ಮಹಮ್ಮದ್ ಯಾಸೀನ್ 3226ನೇ ರ್‍ಯಾಂಕ್

# ಗ್ರಾಮೀಣ ಭಾಗದಲ್ಲಿ ಅರಳಿದ ಪ್ರತಿಭೆ, ಜಿಲ್ಲೆಗೆ 2ನೇ ಸ್ಥಾನ

■ ಉದಯರಶ್ಮಿ ದಿನಪತ್ರಿಕೆ



ಕಲಕೇರಿ: ಸಾಧನೆ ಯಾರ ಸ್ವತ್ತಲ್ಲ, ನಿಶ್ಚಿತ ಗುರಿಯೊಂದಿಗೆ ಸೂಕ್ತ ಮಾರ್ಗದರ್ಶನದಲ್ಲಿ ಸತತ ಪ್ರಯತ್ನ ಮಾಡಿದರೆ ಏನನ್ನಾದರೂ ಸಾಧಿಸಬಹುದು ಎಂಬುದಕ್ಕೆ ಗ್ರಾಮೀಣ ಭಾಗದ ಅಪ್ಪಟ ಹಳ್ಳಿಯ ಪ್ರತಿಭೆ ಮಹಮ್ಮದ್ ಯಾಸೀನ್ ಹೊನ್ನಳ್ಳಿ ಇಂದಿನ ವಿದ್ಯಾರ್ಥಿಗಳಿಗೆ ಮಾದ-ರಿಯಾಗಿ ನಿಲ್ಲುತ್ತಾನೆ. ವಿಜಯಪುರ ಜಿಲ್ಲೆ ತಾಳಿಕೋಟಿ ತಾಲೂಕಿನ ಕಲಕೇರಿ ಗ್ರಾಮದ ಪ್ರೌಢಶಾಲಾ ನಿವೃತ್ತ ಶಿಕ್ಷಕರಾದ ಮಶ್ಯಾಕಸಾಬ್ ಹೊನ್ನಳ್ಳಿ ಹಾಗೂ ತಾಯಿ ಇಮಾಂಬಿ ಹೊನ್ನಳ್ಳಿ ಅವರ ಸುಪುತ್ರನಾದ ಮಹಮ್ಮದ್ ಯಾಸೀನ್ ಹೊನ್ನಳ್ಳಿ ನೀಟ್ (ಯುಜಿ) 2026 ಪರೀಕ್ಷೆಯಲ್ಲಿ 720ಕ್ಕೆ 632 ಅಂಕಗಳನ್ನು ಗಳಿಸಿ ಅಖಿಲಭಾರತ ಮಟ್ಟದಲ್ಲಿ 3226ನೇ ರ್‍ಯಾಂಕ್ ಪಡೆದು ಅತ್ಯುತ್ತಮ ಸಾಧನೆ ಮಾಡಿದ್ದಾರೆ.

ಗ್ರಾಮೀಣ ಭಾಗದ ಎ.ಕೆ.ಸಿರಸಗಿ ಪಿಯು ಕಾಲೇಜಿನಲ್ಲಿ ವಿಜ್ಞಾನ ವಿಭಾಗದಲ್ಲಿ ಅಧ್ಯಯನ ಮಾಡಿದ ವಿದ್ಯಾರ್ಥಿಯು ಕಾಲೇಜಿನ ಅವಧಿಯ ನಂತರ ಮನೆಯಲ್ಲಿಯೇ ಆನ್‌ಲೈನ್ ತರಬೇತಿಯನ್ನೂ ಪಡೆದುಕೊಳ್ಳುವ ಮೂಲಕ ಸತತ ಪರಿಶ್ರಮದ ಅಧ್ಯಯನ ಮಾಡುವ ಮೂಲಕ ಪ್ರಥಮ ಹಂತದಲ್ಲಿಯೇ ನೀಟ್ ಪರೀಕ್ಷೆಯಲ್ಲಿ ವಿಜಯಪುರ ಜಿಲ್ಲೆಗೆ 2ನೇ ರ್‍ಯಾಂಕ್ ಮತ್ತು ಜೆಇಇ ಮುಖ್ಯ ಪರೀಕ್ಷೆಯಲ್ಲಿಯೂ ಸಹ ಶೇ. 98.09 ಅಂಕ ಪಡೆದು ಸಾಧನೆ ಮಾಡಿರುವುದು ಕಾಲೇಜಿನ ಆಡಳಿತ ಮಂಡಳಿ, ಉಪನ್ಯಾಸಕರು ಸೇ-ರಿದಂತೆ ವಿದ್ಯಾರ್ಥಿಯ ತಂದೆ-ತಾಯಿ ಅವರ ಕೀರ್ತಿಯನ್ನು ಹೆಚ್ಚಿಸಿದ್ದು, ಅವರು ಅತೀವ ಸಂತಸ ಮತ್ತು ಸಾರ್ಥಕ ಭಾವವನ್ನು ಮೆರೆದಿದ್ದಾರೆ.

ವಿದ್ಯಾರ್ಥಿಯ ತಂದೆ ಮಶ್ಯಾಕಸಾಬ್ ಹೊನ್ನಳ್ಳಿ ಅವರ ನುಡಿಗಳು: ನಮ್ಮ ಮಗ ಊಟ, ನಿದ್ರೆಯನ್ನು ಬಿಟ್ಟು ಸತತ ಅಧ್ಯಯನ ಮಾಡಿದ್ದರ ಪ್ರತಿಫಲ ಇದಾಗಿದ್ದು, ಪ್ರಾಥಮಿಕ, ಪ್ರೌಢಶಾಲಾ ಹಂತದಿಂದಲೇ ವೈದ್ಯನಾಗಬೇಕೆಂಬ ಕನಸನ್ನು ಹೊತ್ತುಕೊಂಡ ನನ್ನ ಮಗ ಇಂದು ತನ್ನ ಆಸೆಯನ್ನಷ್ಟೇ ಅಲ್ಲ ನಮ್ಮ ಸಮಸ್ತ ಪರಿವಾರದವರ ಆಸೆಯನ್ನೂ ಈಡೇ-ರಿಸಿದ್ದು, ನಮಗೆಲ್ಲ ಖುಷಿ ತಂದಿದ್ದು, ಇದೇ ವೇಳೆ ಅವನ ಅಧ್ಯಯನದಲ್ಲಿ ಸೂಕ್ತ ಮಾರ್ಗದರ್ಶನ ಮತ್ತು ಸಲಹೆ ನೀಡಿ ಪ್ರೋತ್ಸಾಹಿಸಿದ ಕಾಲೇಜಿನ ಆಡಳಿತ ಮಂಡಳಿ ಮತ್ತು ಎಲ್ಲ ಉಪನ್ಯಾಸ ಬಳಗಕ್ಕೂ ನಾವು ಕೃತಜ್ಞತೆ ಸಲ್ಲಿಸುತ್ತೇವೆ. ದೆಹಲಿಯ ನೋಯ್ಡಾದಲ್ಲಿ ಸನ್ಮಾನ: ಪಿಯುಸಿ ಅಧ್ಯಯನ ಮಾಡುತ್ತಿರುವಾಗಲೇ ಆನ್‌ಲೈನ್ ಪಿಡಬ್ಲೂ (ಪಿಜಿಕ್ಸ್ ವಾಲಾ) ಕೋಚಿಂಗ್ ಪಡೆದು ಯಶಸ್ವಿಯಾದ ವಿದ್ಯಾರ್ಥಿಯ ಸಾಧನೆಯನ್ನು ಗುರುತಿಸಿ ಪಿಡಬ್ಲೂ ಸಂಸ್ಥೆಯವರು ದೆಹಲಿಯ ನೊಯಡಾದಲ್ಲಿ ವಿದ್ಯಾರ್ಥಿ ಮತ್ತು ಪಾಲಕರನ್ನು ಏರೋಪ್ಲೇನ್‌ನಲ್ಲಿ ಬಂದು ಹೋಗುವ ಎಲ್ಲ ಖರ್ಚು ವೆಚ್ಚಗಳನ್ನು ಭರಿಸಿ ಅಲ್ಲಿಗೆ ಕರೆಸಿ ಸನ್ಮಾನಿಸಿ ಗೌರವ ಸಲ್ಲಿಸಿದ್ದು, ವಿದ್ಯಾರ್ಥಿ ಮತ್ತು ಪಾಲಕರಲ್ಲಿ ಮತ್ತಷ್ಟು ಖುಷಿ ಹೆಚ್ಚಿಸಿದೆ.

# ಜು.26 ರಂದು ಸಣ್ಣ ಮತ್ತು ಜಿಲ್ಲಾ ಪತ್ರಿಕೆಗಳ ಸಂಘದ ಪದಗ್ರಹಣ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕರ್ನಾಟಕ ಸಣ್ಣ ಮತ್ತು ಜಿಲ್ಲಾ ಪತ್ರಿಕೆಗಳ ಸಂಘದ ಅಧಿಕಾರ ಪದಗ್ರಹಣ ಮತ್ತು ಮೊದಲ ಕಾರ್ಯಕಾರಿ ಸಮಿತಿ ಸಭೆಯನ್ನು ಇದೇ ದಿನಾಂಕ : 26 ರಂದು ರವಿವಾರ ಜಗರುಗಲಿದೆ ಎಂದು ಸಂಘದ ರಾಜ್ಯಾಧ್ಯಕ್ಷ ಷಾ ಮಂಜುನಾಥ ಹಾಗೂ ಪ್ರಧಾನ ಕಾರ್ಯದರ್ಶಿ ಮೋಹನ ಕುಲಕರ್ಣಿ ತಿಳಿಸಿದ್ದಾರೆ.

ಅಂದು ಬೆಳಿಗ್ಗೆ 10 ಘಂಟೆಗೆ ನಗರದ ಕಾರ್ಯನಿರತ ಪತ್ರಕರ್ತರ ಸಂಘದ ಕಾರ್ಯಾಲಯದ ಪತ್ರಿಕಾ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದಲ್ಲಿ ಸಂಘದ ಕೋಶಾಧ್ಯಕ್ಷ ಎಚ್.ಎಲ್. ಸುರೇಶ ಅವರು ಸದಸ್ಯತ್ವ ಸ್ವೀಕರಿಸಲಿದ್ದಾರೆ.

ಇದೇ ಸಂದರ್ಭದಲ್ಲಿ ನೂತನ ಪದಾಧಿಕಾರಿಗಳಿಗೆ ಪ್ರಮಾಣ ಪತ್ರ ವಿತರಿಸಲಾಗುವುದು.

ಈ ಸಂಘದಲ್ಲಿ ಸದಸ್ಯರಾಗಬಯಸುವವರು ಮಾಧ್ಯಮ ಪಟ್ಟಿಯಲ್ಲಿರುವ ಸಂಪಾದಕರು 1100.00 ರೂ. ಶುಲ್ಕನೀಡಿ ಸದಸ್ಯರಾಗಬಹುದು ಎಂದು ತಿಳಿಸಿದ್ದಾರೆ.

ಸಂಘದ ಪದಾಧಿಕಾರಿಗಳಿಗೆ ನೇಮಕಾತಿ ಪತ್ರ ವಿತರಿಸಲಾಗುವುದು.

ಕಾರಣ ಮಾಧ್ಯಮ ಪಟ್ಟಿಯಲ್ಲಿರುವ ಸಂಪಾದಕರು ಸಭೆಗೆ ಆಗಮಿಸಿ ಕಾರ್ಯಕ್ರಮಕ್ಕೆ ಶೋಭೆ ತರಬೇಕೆಂದು ಅವರು ಕೋರಿದ್ದಾರೆ.

## ನಾನೊಂದ ನೆನೆದೊಡೆ ತಾನೊಂದ ನೆನೆವುದು

ನಾನೊಂದ ನೆನೆದೊಡೆ ತಾನೊಂದ ನೆನೆವುದು .. ಎಂಬ ಬಸವಣ್ಣನವರ ಈ ವಚನ ಪ್ರತಿಯೊಬ್ಬರ ಮನದ ವಿಚಿತ್ರ ವ್ಯವಸ್ಥೆ ಹಾಗೂ ಹೊಯ್ದಾಟವನ್ನು ಚಿತ್ರಿಸುತ್ತದೆ. ಅಕ್ಕ ಮಹಾದೇವಿ ಕಾಯಕ್ಕೆ ನೆಳಲಾಗಿ ಕಾಡಿತ್ತು ಮಾಯೆ ಎಂದು ಮನೋವಿಕಾರತೆಯ ಬಗ್ಗೆ ವಿವರಿಸುತ್ತಾರೆ. ಮನಷ್ಯನ ದುಕನ್ನು ಅಲ್ಲೋಲ ಕಲ್ಲೋಲ ಮಾಡುತ್ತದೆ. ನಾ, ನೀ ಅನ್ನುವವರನ್ನು ಎಡಮುರಿಗಟ್ಟಿದೆ ಈ ಮಾಯೆ. ಎಂಥೆಂಥವರೂ ಈ ಮಾಯೆಯ ದವಡೆಗೆಸಿಕ್ಕಿದ್ದಾರೆ. ಈ ಮಾಯೆಯನ್ನು ಗೆದ್ದವರು ಮಹಾನುಭಾವರು, ಸಂತರು, ಶಿವ ಯೋಗಿಗಳು ಎನಿಸಿ ಕೊಳ್ಳುತ್ತಾರೆ. ಬ್ರಹ್ಮ ಘನವೆಂಬನೆ ಬ್ರಹ್ಮನ ನುಂಗಿತ್ತು ಹೀಗೆ ವಿಷ್ಣು, ರುದ್ರ,ತಾ ಸೇರಿದಂತೆ ಎಲ್ಲರೂ ಮಯಾಕೋಲಾಹ ಲಕ್ಕೀಡಾದವರೇ ಎಂಬುದನ್ನು ಅಲ್ಲಮಪ್ರಭುಗಳು ಈ ವಚನದಲ್ಲಿ ತಿಳಿಸಿದ್ದಾರೆ.

# ಬೇಡ ಬ್ರೋ, ರೈಸ್ ಅಭಿಯಾನ ಇಎಸ್‌ಐಸಿ ಆಸ್ಪತ್ರೆಯಲ್ಲಿ ಕಾರ್ಯಾಗಾರ: 2,300 ವಿದ್ಯಾರ್ಥಿಗಳು ಭಾಗಿ



ಕಲಬುರಗಿ:ಕಲಬುರಗಿ ನಗರ ಮತ್ತು ಕಲಬುರಗಿ ಜಿಲ್ಲಾ ಪೊಲೀಸ್ ಸಂಯುಕ್ತಾಶ್ರಯದಲ್ಲಿ ನಗರದ ನೌಕರರ ರಾಜ್ಯ ವಿಮಾ ನಿಗಮ (ಇಎಸ್‌ಐಸಿ) ಆಸ್ಪತ್ರೆಯಲ್ಲಿ ನಗರದ ವಿವಿಧ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಮಾದಕ ದ್ರವ್ಯಗಳ ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಲಾಯಿತು.

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ಅಧಿಕಾರಿ ಡಾ.ಎಂ.ಡಿ.ಇರ್ಫಾನ್ ಮಹಾಗಾವಿ ಅವರು ವಿದ್ಯಾರ್ಥಿಗಳಿಗೆ ವಿವಿಧ ಮಾದಕ ವಸ್ತುಗಳ ಬಗ್ಗೆ ಮಾಹಿತಿ ನೀಡಿ, ಮಾದಕ ವಸ್ತುಗಳು ನಮ್ಮ ದೇಹದ ಮೇಲೆ ಬೀರುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಿದರು. ದುಶ್ಚಟಗಳಿಂದ ಹೇಗೆ ದೂರವಿರಬೇಕು ಮತ್ತು ಮಾದಕ ವ್ಯಸನದಿಂದ ದೂರಾವಾಗಲು ವಹಿಸಬೇಕಾದ ಕ್ರಮಗಳ ಬಗ್ಗೆ ಸಲಹೆ ನೀಡಿದರು.

ನಗರದ ವಿವಿಧ ಶಾಲಾ-ಕಾಲೇಜುಗಳಿಂದ ಸುಮಾರು 2,000 ವಿದ್ಯಾರ್ಥಿಗಳು ಜಾಗೃತಿ ಅಭಿಯಾನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಮಾದಕ ದ್ರವ್ಯಗಳ ವ್ಯಸನದಿಂದಾಗುವ ದುಷ್ಪರಿಣಾಮಗಳ ಕುರಿತು ನಗರದ ವಿವಿಧ ಶಾಲಾ-ಕಾಲೇಜುಗಳಲ್ಲಿ ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿದ್ದು, ಸ್ಪರ್ಧೆಯಲ್ಲಿ ವಿಜೇತರಾದ 96 ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರಮಾಣ ಪತ್ರ ನೀಡಲಾಯಿತು.

ಕಲಬುರಗಿ ನಗರ ಮತ್ತು ಕಲಬುರಗಿ ಜಿಲ್ಲೆಯಲ್ಲಿ ಮಾದಕ ದ್ರವ್ಯಗಳ ಮಾರಾಟ, ಸಂಗ್ರಹಣೆ, ಸೇವನೆ ಮಾಡುವವರ ವಿರುದ್ಧ ಎಂಡಿಪಿಎಸ್ ಕಾಯ್ದೆ ಅಡಿಯಲ್ಲಿ ಕ್ರಮ ಕೈಗೊಳ್ಳಲಾಗುತ್ತಿದ್ದು, ಕಾರಣ ವಿದ್ಯಾರ್ಥಿಗಳು, ಯುವಕರು ಮತ್ತು ಸಾರ್ವಜನಿಕರು ಯಾವುದೇ ರೀತಿಯ ಮಾರಕ ದ್ರವ್ಯದ ವ್ಯಸನಕ್ಕೆ ಬಲಿಯಾಗದಂತೆ ಎಚ್ಚರ ವಹಿಸುವಂತೆ ಜಾಗೃತಿ ಮೂಡಿಸಲಾಯಿತು.

ಸನ್ಮಿತ್ರ ಯೋಜನೆಯಡಿಯಲ್ಲಿ ಕಲಬುರಗಿ ನಗರ ಮತ್ತು ಕಲಬುರಗಿ ಜಿಲ್ಲೆಯ ಪ್ರತಿ ಪೊಲೀಸ್ ಠಾಣೆಯಲ್ಲಿ ಮಾದಕ ದ್ರವ್ಯದ ವ್ಯಸನಕ್ಕೊಳಗಾದ ವ್ಯಕ್ತಿಯ ಪುನ: ಪರಿವರ್ತನೆ ಮಾಡುವ ಸಲುವಾಗಿ ಹಾಗೂ ವ್ಯಕ್ತಿಯ ವೈದ್ಯಕೀಯ ಚಿಕಿತ್ಸೆಗೆ ಸಹಕರಿಸಲು ಮತ್ತು ಮಾದಕ ವ್ಯಸನದ ಚಟದಿಂದ ಮುಕ್ತಗೊಳ್ಳುವವರೆಗೆ ಅವನ ಚಟುವಟಿಕೆಗಳ ಮೇಲೆ ನಿಗಾ ವಹಿಸಲು ಒಬ್ಬ ಪೊಲೀಸ್ ಸಿಬ್ಬಂದಿಯನ್ನು ಯೋಜಿಸಲಾಗಿರುತ್ತದೆ. ಕಲಬುರಗಿ ಮತ್ತು ಜಿಲ್ಲೆಯಲ್ಲಿ ಮಾದಕ ದ್ರವ್ಯಗಳ ಮಾರಾಟ, ಸಂಗ್ರಹಣೆ, ಸೇವನೆ ಮಾಡುವವರ ಕುರಿತು ಮಾಹಿತಿ ಇದ್ದಲ್ಲಿ ಸಹಾಯವಾಣಿ ಸಂಖ್ಯೆ 112 ಹಾಗೂ 1908 ಮತ್ತು ಕೆಪಿಎಸ್ ಪ್ ಮೂಲಕ ಮಾಹಿತ ನೀಡುವಂತೆ ಕೋರಲಾಯಿತು ಮತ್ತು ಮಾಹಿದಾರರ ಕುರಿತು ಮಾಹಿತಿ ಗೌಪ್ಯವಾಗಿರಿಸುವ ಬಗ್ಗೆ ಭರವಸೆ ನೀಡಲಾಯಿತು.

ಎಸ್‌ಪಿ ಅಡ್ಡೂರು ಶ್ರೀನಿವಾಸಲು, ಹೆಚ್ಚುವರಿ ಎಸ್‌ಪಿ ಮಹೇಶ್ ಮೇಘಣ್ಣನವರ್, ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ., ಡಿಸಿಪಿಗಳಾದ ಶಾಲೂ, ಪ್ರವೀಣ್ ನಾಯಕ್ ಸೇರಿದಂತೆ ಇತರ ಪೊಲೀಸ್ ಅಧಿಕಾರಿಗಳು ಮತ್ತು ಇಎಸ್‌ಐಸಿ ಆಸ್ಪತ್ರೆ ವೈದ್ಯರು, ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಜೇವರಗಿ: ಜೆಸ್ಕಾಂ,ಕೆಪಿಟಿಸಿಎಲ್ ಪ್ರಗತಿ ಪರಿಶೀಲನಾ ಸಭೆ




ಕಲಬುರಗಿ: ಜೇವರ್ಗಿಯ ತಾಲೂಕು ಆಡಳಿತ ಕಚೇರಿಯಲ್ಲಿ ಜೆಸ್ಕಾಂ ಅಧ್ಯಕ್ಷ ಪ್ರವೀಣ್ ಪಾಟೀಲ್ ಹರವಾಳ ಅವರ ಅಧ್ಯಕ್ಷತೆಯಲ್ಲಿ ಜೆಸ್ಕಾಂ ಮತ್ತು ಕೆ.ಪಿ.ಟಿ.ಸಿ.ಎಲ್ ಅಧಿಕಾರಿಗಳ ಮುಖ್ಯ ಪ್ರಗತಿ ಪರಿಶೀಲನಾ ಸಭೆ ನಡೆಯಿತು

ಜೆಸ್ಕಾಂ ಪ್ರಗತಿ ಪರಿಶೀಲನಾ ಸಭೆಗೂ ಮುನ್ನ ಜೇವರ್ಗಿ ತಾಲೂಕಿನ ವಿವಿಧ ಗ್ರಾಮೀಣ ಮತ್ತು ನಗರ ಪ್ರದೇಶಗಳಿಗೆ ಖುದ್ದಾಗಿ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಲಾಯಿತು. ಈ ವೇಳೆ ಸಾರ್ವಜನಿಕರಿಗೆ ಅಪಾಯವನ್ನುಂಟುಮಾಡುವಂತಿದ್ದ ಹಾಗೂ ಶಿಥಿಲಾವಸ್ಥೆಯಲ್ಲಿದ್ದ ವಿದ್ಯುತ್ ಕಂಬಗಳನ್ನು ಗಮನಿಸಿ, ಸಾರ್ವಜನಿಕರ ಸುರಕ್ಷತೆಯ ದೃಷ್ಟಿಯಿಂದ ಅವುಗಳನ್ನು ತಕ್ಷಣವೇ ತೆರವುಗೊಳಿಸಿ ಹೊಸ ಕಂಬಗಳನ್ನು ಅಳವಡಿಸಲು ಅಧಿಕಾರಿಗಳಿಗೆ ಸೂಕ್ತ ಸೂಚನೆ ನೀಡಲಾಯಿತು.ನಂತರ, ಜೇವರ್ಗಿ ತಾಲೂಕಿನ ಕೂಡಿ ದರ್ಗಾದಲ್ಲಿರುವ 33/11 ಕೆ.ವಿ ವಿದ್ಯುತ್ ಉಪಕೇಂದ್ರಕ್ಕೆ ಭೇಟಿ ನೀಡಿ, ಅಲ್ಲಿನ ವಿದ್ಯುತ್ ಸರಬರಾಜು ವ್ಯವಸ್ಥೆ, ನಿಯಂತ್ರಣ ಕೊಠಡಿ ಹಾಗೂ ತಾಂತ್ರಿಕ ಕಾರ್ಯವೈಖರಿಯನ್ನು ಪ್ರತ್ಯಕ್ಷವಾಗಿ ವೀಕ್ಷಿಸಿ ಪರಿಶೀಲಿಸಲಾಯಿತು.

ಜೇವರ್ಗಿಯ ತಾಲೂಕು ಆಡಳಿತ ಕಚೇರಿಯಲ್ಲಿ ಜೆಸ್ಕಾಂ ಮತ್ತು ಕೆ.ಪಿ.ಟಿ.ಸಿ.ಎಲ್ ಅಧಿಕಾರಿಗಳ ಮುಖ್ಯ ಪ್ರಗತಿ ಪರಿಶೀಲನಾ ಸಭೆ ನಡೆಸಿ, ಚಾಲ್ತಿಯಲ್ಲಿರುವ ಪ್ರತಿಯೊಂದು ಕಾಮಗಾರಿಯ ಪ್ರಗತಿಯನ್ನು ಪರಾಮರ್ಶಿಸಿ, ನಿಗದಿತ ಕಾಲಮಿತಿಯೊಳಗೆ ಕಡ್ಡಾಯವಾಗಿ ಪೂರ್ಣಗೊಳಿಸುವಂತೆ ಎಚ್ಚರಿಸಲಾಯಿತು. ಮುಖ್ಯಮಂತ್ರಿಗಳ ಆದೇಶದಂತೆ ಪ್ರತಿಯೊಬ್ಬ ಫಲಾನುಭವಿಯ ಮನೆಗೂ ಭೇಟಿ ನೀಡಿ 'ಗೃಹ ಜ್ಯೋತಿ' ಯೋಜನೆಯ ಪರಿಶೀಲನೆ ನಡೆಸಲು, ಸಾರ್ವಜನಿಕರಿಗೆ ನಿರಂತರ ಹಾಗೂ ಗುಣಮಟ್ಟದ ವಿದ್ಯುತ್ ಪೂರೈಸಲು,ಬಾಕಿ ವಿದ್ಯುತ್ ಬಿಲ್ ಪಾವತಿಸದ ಸಂಪರ್ಕಗಳನ್ನು ಯಾವುದೇ ದಾಕ್ಷಿಣ್ಯವಿಲ್ಲದೆ ತಕ್ಷಣವೇ ವಿದ್ಯುತ್ ಕಡಿತಗೊಳಿಸಲು, ಅಕ್ರಮ ವಿದ್ಯುತ್ ಸಂಪರ್ಕಗಳಿಗೆ ತಡೆ ನೀಡಿ ಟ್ರಾನ್ಸ್‌ಫಾರ್ಮಗಳ ವೈಫಲ್ಯವನ್ನು ತಡೆಯಲು ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲು ನಿರ್ದೇಶಿಸಲಾಯಿತು. ಜೊತೆಗೆ, ಈಗಾಗಲೇ ಮಂಜೂರಾಗಿರುವ ಉಪಕೇಂದ್ರಗಳ ಹೊರತಾಗಿ, ವಿದ್ಯುತ್ ಬಳಕೆ ಹೆಚ್ಚಿರುವ ಪ್ರದೇಶಗಳಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ಹೊಸ ವಿದ್ಯುತ್ ಉಪಕೇಂದ್ರ ಸ್ಥಾಪನೆಗೆ ಅಗತ್ಯ ಪ್ರಸ್ತಾಪನೆಗಳನ್ನು ಕೂಡಲೇ ಸಲ್ಲಿಸುವಂತೆ ಸೂಚಿಸಲಾಯಿತು. ಇದಲ್ಲದೆ, ಪ್ರತಿ ತಿಂಗಳು ಕಡ್ಡಾಯವಾಗಿ ಮುನ್ನೆಚ್ಚರಿಕಾ ನಿರ್ವಹಣೆ ನಡೆಸಲು, ರೈತರಿಗೆ ವಿದ್ಯುತ್ ಪೂರೈಸುವಲ್ಲಿ ಯಾವುದೇ ರಾಜಿ ಮಾಡಿಕೊಳ್ಳದಂತೆ ಹಾಗೂ ಬಾಕಿ ಬಿಲ್ ವಸೂಲಿ ಮಾಡುವ ಮೂಲಕ ಸಂಸ್ಥೆಯ ಆದಾಯ ಹೆಚ್ಚಿಸಲು ಸಭೆಯಲ್ಲಿದ್ದ ಎಲ್ಲಾ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶ ನೀಡಲಾಯಿತು. ಎಲ್ಲಾ ಕಾರ್ಯಾಚರಣೆ ಮತ್ತು ನಿರ್ವಹಣೆ ವಿಭಾಗಕ್ಕೆ ತುರ್ತು ಕಾಮಗಾರಿಗಳಿಗಾಗಿ ಈಗಾಗಲೇ ಅಗತ್ಯ ಪ್ರಮಾಣದ ಟ್ರಾನ್ಸ್‌ಫಾರ್ಮಗಳನ್ನು ಹಂಚಿಕೆ ಮಾಡಲಾಗಿದ್ದು, ಕೆಲಸಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಜೆಸ್ಕಾಂ ಅಧ್ಯಕ್ಷರು ನಿರ್ದೇಶಿಸಿದರು.

# ವಚನ ಸಾಹಿತ್ಯದಲ್ಲಿ ಶಿಕ್ಷಣ

■ ಉದಯರಶ್ಮಿ ದಿನಪತ್ರಿಕೆ

ವಚನ ಸಾಹಿತ್ಯವು 12ನೇ ಶತಮಾನದಲ್ಲಿ ಕರ್ನಾಟಕದಲ್ಲಿ ಉದಯಿಸಿದ, ಸಾಮಾಜಿಕ ಕ್ರಾಂತಿ ಮತ್ತು ಆಧ್ಯಾತ್ಮಿಕ ಚಿಂತನೆಯನ್ನು ಬಿಂಬಿಸುವ ಅದ್ಭುತ ಸಾಹಿತ್ಯ ಪ್ರಕಾರವಾಗಿದೆ. ಇದು ಸರಳ ಕನ್ನಡದಲ್ಲಿ ರಚಿತವಾದ ಗದ್ಯ-ರೂಪದ ಕಾವ್ಯವಾಗಿದ್ದು, ಜಾತಿ ಪದ್ಧತಿ ಮತ್ತು ಮೂಢನಂಬಿಕೆಗಳನ್ನು ವಿರೋಧಿಸಿ, ಸಮಾನತೆ ಹಾಗೂ ಕಾಯಕ ಮಹತ್ವವನ್ನು ಸಾರುತ್ತದೆ.


ಪ್ರಮುಖ ಲಕ್ಷಣಗಳು


ಅಂಕಿತನಾಮ: ಪ್ರತಿಯೊಂದು ವಚನವು ಕೊನೆಯಲ್ಲಿ ಶಿವನ ಅಥ-'ವಾ ಇಷ್ಟಲಿಂಗದ ಹೆಸರನ್ನು 'ಅಂಕಿತನಾಮ'ವಾಗಿ ಹೊಂದಿರುತ್ತದೆ (ಉದಾಹರಣೆಗೆ: ಕೂಡಲಸಂಗಮದೇವ, ಗುಹೇಶ್ವರ).

ಸರಳತೆ: ಸಂಸ್ಕೃತ ಭಾಷೆಯ ಕಠಿಣ ನಿಯಮಗಳಿಲ್ಲದೆ, ಜನಸಾಮಾನ್ಯರ ಆಡುಭಾಷೆಯಲ್ಲಿ ರಚಿತವಾಗಿದೆ.

ಕಾಯಕ ತತ್ವ: 'ಕಾಯಕವೇ ಕೈಲಾಸ' (ಕೆಲಸವೇ ಪೂಜೆ) ಎಂಬ ಮೌಲ್ಯವನ್ನು ಬಲವಾಗಿ ಪ್ರತಿಪಾದಿಸುತ್ತದೆ.

ಪ್ರಮುಖ ವಚನಕಾರರು ಮತ್ತು ಅವರ ಅಂಕಿತನಾಮಗಳು





ಬಸವಣ್ಣ: ವಚನ ಸಾಹಿತ್ಯದ ಪ್ರವರ್ತಕರು, 'ಕೂಡಲಸಂಗಮದೇವ'.

ಅಕ್ಕಮಹಾದೇವಿ : ಮಹಿಳಾ ವಚನಗಾರ್ತಿ, 'ಚೆನ್ನಮಲ್ಲಿಕಾರ್ಜುನ'. ಅಲ್ಲಮಪ್ರಭು:ವಚನಕಾರರಮಾರ್ಗದರ್ಶಿ, 'ಗುಹೇಶ್ವರ'. ಜೇಡರ ದಾಸಿಮಯ್ಯ: ಮೊಟ್ಟಮೊದಲ ವಚನಕಾರರಲ್ಲಿ ಒಬ್ಬರು, 'ರಾಮನಾಥ

ವಚನ ಸಾಹಿತ್ಯದಲ್ಲಿ ಶಿಕ್ಷಣವು ಕೇವಲ ಅಕ್ಷರ ಜ್ಞಾನಕ್ಕೆ ಸೀಮಿತವಾಗಿರದೆ, ಅದು ಜೀವನ ಮೌಲ್ಯ, ಕಾಯಕ ನಿಷ್ಠೆ, ಮತ್ತು ಮಾನವೀಯತೆಯ ಬುನಾದಿಯಾಗಿದೆ.

12ನೇ ಶತಮಾನದ ಶರಣರು ಶಿಕ್ಷಣವನ್ನು ಎಲ್ಲರಿಗೂ ಮುಕ್ತಗೊಳಿಸಿದರು. ಬಸವಣ್ಣನವರ 'ಅನುಭವ ಮಂಟಪ'ವು ಲಿಂಗ, ಜಾತಿ ಭೇದವಿಲ್ಲದೆ ಜ್ಞಾನವನ್ನು ಹಂಚುವ ವಿಶ್ವವಿದ್ಯಾಲಯವಾಗಿ-ತ್ತು. ವಚನಗಳ ಪ್ರಮುಖ ಶೈಕ್ಷಣಿಕ ಆಯಾಮಗಳು ಇಲ್ಲಿವೆ:

ಕಾಯಕವೇ ಕೈಲಾಸ

ಯಾವುದೇ ಕೆಲಸವನ್ನು ಕೀಳಾಗಿ ಕಾಣದೆ, ಶ್ರದ್ಧೆಯಿಂದ ಮಾಡುವುದೇ ನಿಜವಾದ ಶಿಕ್ಷಣ ಮತ್ತು ಪೂಜೆ ಎಂದು ಶರಣರು ಪ್ರತಿಪಾದಿಸಿದರು.

ನೈತಿಕ ಮತ್ತು ಮೌಲ್ಯಾಧಾರಿತ ಶಿಕ್ಷಣ: ಶಿಕ್ಷಣವು ಮನುಷ್ಯನ ದುರ್ಗುಣಗಳನ್ನು ತೊಡೆದು, ಆಂತರಿಕ ಮತ್ತು ಬಾಹ್ಯ ಶುದ್ಧಿಯನ್ನು ತರಬೇಕು ಎಂಬುದು ವಚನಕಾರರ ಆಶಯವಾಗಿದೆ.

ಸರಳತೆ ಮತ್ತು ಪ್ರಾದೇಶಿಕ ಭಾಷೆ

ಜನಸಾಮಾನ್ಯರಿಗೆ ಅರ್ಥವಾಗುವ ಸರಳ ಕನ್ನಡದಲ್ಲಿ (ಕಾಲೋಕೀಯ ಭಾಷೆ) ವಚನಗಳನ್ನು ರಚಿಸಲಾಯಿತು, ಇದು ಜ್ಞಾನದ ಪ್ರಜಾಪ್ರಭುತ್ವೀಕರಣಕ್ಕೆ ನಾಂದಿ ಹಾಡಿತು.

ಅನುಭಾವದ ಕಲಿಕೆ

ಪುಸ್ತಕದಬಾಯಿಪಾಠಕ್ಕಿಂತ,ಅನುಭವ ಮತ್ತು ಆಂತರಿಕ ಜ್ಞಾನಕ್ಕೆ ವಚನಗಳಲ್ಲಿ ಹೆಚ್ಚು ಒತ್ತು ನೀಡಲಾಗಿದೆ.ವಚನ ಸಾಹಿತ್ಯದ ಈ ಮೌಲ್ಯಗಳನ್ನು ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಅಳವಡಿಸಿಕೊಳ್ಳುವುದರಿಂದ ವಿದ್ಯಾರ್ಥಿಗಳಲ್ಲಿ ಉತ್ತಮ ವ್ಯಕ್ತಿತ್ವವನ್ನು ರೂಪಿಸಬಹುದು

ವಚನ ಸಾಹಿತ್ಯವು 12ನೇ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ನಡೆದ ಸಾಮಾಜಿಕ ಮತ್ತು ಧಾರ್ಮಿಕ ಕ್ರಾಂತಿಯ ಅಭಿವ್ಯಕ್ತಿಯಾಗಿದೆ. ಜಾತಿ, ಲಿಂಗ ತಾರತಮ್ಯವನ್ನು ವಿರೋಧಿಸಿ, ಕಾಯಕ ಮತ್ತು ದಾಸೋಹ ತತ್ವಗಳ ಮೂಲಕ ಸಮಾನತೆಯ ಸಮಾಜವನ್ನು ನಿರ್ಮಿಸುವುದು ಇದರ ಮುಖ್ಯ ಉದ್ದೇಶವಾಗಿತ್ತು. ಇದು ಕನ್ನಡ ಸಾಹಿತ್ಯದ ಅತ್ಯಂತ ಮೌಲಿಕ ಮತ್ತು ವಿಶಿಷ್ಟವಾದ ಜನಪರ ಸಾಹಿತ್ಯ ಪ್ರಕಾರವಾಗಿದೆ.

ವಚನ ಸಾಹಿತ್ಯದ ಉಪಸಂಹಾರದ ಪ್ರಮುಖ ಅಂಶಗಳು

ಸಾರ್ವಕಾಲಿಕ ಮೌಲ್ಯಗಳು

ವಚನಗಳು ಕೇವಲ 12ನೇ ಶತಮಾನಕ್ಕೆ ಮಾತ್ರ ಸೀಮಿತವಾಗಿರದೆ, ಇಂದಿಗೂ ಪ್ರಸ್ತುತವಾಗಿರುವ ಮಾನವೀಯ ಮೌಲ್ಯಗಳಾದ ಸತ್ಯ, ಕರುಣೆ, ಪ್ರಾಮಾಣಿಕತೆ ಮತ್ತು ಅಹಿಂಸೆಯನ್ನು ಬೋಧಿಸುತ್ತವೆ.

ಸಾಮಾಜಿಕ ಕ್ರಾಂತಿ

ಶರಣರು ಪ್ರತಿಪಾದಿಸಿದ "ಕಾಯಕವೇ ಕೈಲಾಸ" ಮತ್ತು "ದಾಸೋಹ" ಪರಿಕಲ್ಪನೆಗಳು ಶ್ರಮ ಸಂಸ್ಕೃತಿಗೆ ಗೌರವ ತಂದುಕೊಟ್ಟವು. ಇದು ದುಡಿಮೆಯೇ ಮನುಷ್ಯನ ಘನತೆಯ ಮಾನದಂಡ ಎಂದು ಸಾರಿತು.

ಪ್ರಜಾಪ್ರಭುತ್ವದ ಆಶಯ


'ಅನುಭವ ಮಂಟಪ'ದ ಮೂಲಕ ಲಿಂಗ, ಜಾತಿ ಭೇದವಿಲ್ಲದೆ ಎಲ್ಲ-ರಿಗೂ ಆಧ್ಯಾತ್ಮಿಕ ಮತ್ತು ಸಾಮಾಜಿ-ಕ ಚಿಂತನೆಯಲ್ಲಿ ಪಾಲ್ಗೊಳ್ಳುವ ಹಕ್ಕನ್ನು ನೀಡಿ, ವಿಶ್ವದ ಪ್ರಪ್ರಥಮ ಪ್ರಜಾಸತ್ತಾತ್ಮಕ ಚಿಂತನೆಗೆ ನಾಂದಿ ಹಾಡಿದರು.


ಆಡುಭಾಷೆಯ ಬಳಕೆ

ಸಂಸ್ಕೃತದಂತಹಕ್ಲಿಷ್ಟಕರಭಾಷೆಯನ್ನು ಬಿಟ್ಟು, ಸಾಮಾನ್ಯರ ಆಡುಭಾಷೆಯಾದ ಕನ್ನಡದಲ್ಲಿ ವಚನಗಳನ್ನು ರಚಿಸುವ ಮೂಲಕ ಸಾಹಿತ್ಯವನ್ನು ಜನಸಾಮಾನ್ಯರ ಮನೆ-ಮನ ತಲುಪಿಸಿದರು.

ವಚನಗಳು ಬಂಡಾಯದ ಗಟ್ಟಿ ಧ್ವನಿ

12ನೇ ಶತಮಾನದ ವಚನ ಸಾಹಿತ್ಯವು ಮೂಲತಃ ಅಂದಿನ ಸಮಾಜದಲ್ಲಿದ್ದ ಜಡತ್ವ, ಶೋಷಣೆ ಮತ್ತು ವೈದಿಕ ಪರಂಪರೆಯ ವಿರುದ್ಧ ಹುಟ್ಟಿಕೊಂಡ ಮೊದಲ ಸಮಾಜಮುಖಿ ಬಂಡಾಯದ ದನಿಯಾಗಿದೆ. ಬಸವಣ್ಣನವರ ನೇತೃತ್ವದಲ್ಲಿ ನಡೆದ ಈ ವಚನ ಚಳವಳಿಯು ಕೇವಲ





ಧಾರ್ಮಿಕ ಸುಧಾರಣೆಯಾಗಿರದೆ, ಅಸಮಾನತೆಯ ವ್ಯವಸ್ಥೆಯನ್ನು ಬುಡಮೇಲು ಮಾಡಿದ ಕ್ರಾಂತಿಕಾರಕ ಸಾಮಾಜಿಕ ಚಳವಳಿಯಾಗಿತ್ತು.

ವಚನ ಸಾಹಿತ್ಯದಲ್ಲಿ ಕಂಡುಬರುವ ಪ್ರಮುಖ ಬಂಡಾಯ ಧೋರಣೆಗಳನ್ನು ಈ ಕೆಳಗಿನಂತೆ ವಿಶ್ಲೇಷಿಸಬಹುದು

1. ಜಾತಿ ಪದ್ಧತಿ ಮತ್ತು ಅಸಮಾನತೆಯ ವಿರುದ್ಧ ಪ್ರತಿಭಟನೆ

ಜಾತಿ ನಿರಾಕರಣೆ: ಹುಟ್ಟಿನಿಂದ ಯಾರೂ ಶ್ರೇಷ್ಠರಲ್ಲ ಎಂದು ಸಾರಿದ ಶರಣರು, ಬ್ರಾಹ್ಮಣನಿಂದ ಹಿಡಿದು ಮಾದಾರ ಚನ್ನಯ್ಯನವರೆಗೆ ಎಲ್ಲರನ್ನೂ ಸಮಾನವಾಗಿ ಕಂಡರು.

ಸಮಸಮಾಜದ ಕನಸು: ಜನ್ಮ ಆದ-ಾರಿತ ಜಾತಿ ಸೂತಕಗಳನ್ನು ಕಟುವಾಗಿ ಟೀಕಿಸಿ, ಗುಣ ಮತ್ತು ಆಚರಣೆಯ ಆದ-ಾರದ ಮೇಲೆ ಮನುಷ್ಯನ ಯೋಗ್ಯತೆಯನ್ನು ನಿರ್ಧರಿಸಿದರು.

2. ಧಾರ್ಮಿಕ ಮತ್ತು ಪುರೋಹಿತಶಾಹಿಯ ಧಿಕ್ಕಾರ

ಡಾಂಭಿಕ ಆಚರಣೆಗಳ ವಿರೋಧ: ಯಜ್ಞ-ಯಾಗಾದಿಗಳು,ಪ್ರಾಣಿಬಲಿ,ತೀಥ-'ಯಾತ್ರೆ ಹಾಗೂ ಮೂಢನಂಬಿಕೆಗಳನ್ನು ವಚನಕಾರರು ತೀವ್ರವಾಗಿ ಖಂಡಿಸಿದರು.

ಸ್ಥಾವರಕ್ಕೆಅಳಿವಿದೆ,ಜಂಗಮಕ್ಕಳಿವಿಲ್ಲ: ಭವ್ಯದೇಗುಲಗಳ ಸಂಸ್ಕೃತಿಯನ್ನು ಧಿಕ್ಕರಿಸಿ, ಮಾನವನ ದೇಹವೇ ದೇವಾಲಯವೆಂದು ಘೋಷಿಸುವ ಮೂಲಕ ಧರ್ಮವನ್ನು ಜನಸಾಮಾನ್ಯರ ಕೈಗೆ ತಂದರು.

3. ಭಾಷಾ ಕ್ರಾಂತಿ ಮತ್ತು ಸಾಹಿತ್ಯದ ಪ್ರಜಾಪ್ರಭುತ್ವೀಕರಣ

ಜನಭಾಷೆಯ ಬಳಕೆ: ಸಂಸ್ಕೃತದ ಪಾಂಡಿತ್ಯದ ಯಜಮಾನಿಕೆಯನ್ನು ಮು-ರಿದು, ಸಾಮಾನ್ಯ ಜನ ಆಡುವ ಸರಳ ಕನ್ನಡದಲ್ಲಿ (ವಚನಗಳು) ಗಹನವಾದ ತತ್ವಗಳನ್ನು ಅಭಿವ್ಯಕ್ತಪಡಿಸಿದರು.

ಅಭಿವ್ಯಕ್ತಿ ಸ್ವಾತಂತ್ರ್ಯ: ಸಮಾಜದ ತಳಸಮುದಾಯದ ಕಾಯಕಜೀವಿಗಳಿಗೂ ಸಾಹಿತ್ಯ ರಚನೆ ಮಾಡುವ ಹಕ್ಕನ್ನು ತಂದುಕೊಟ್ಟರು.

4. ಕಾಯಕ ಮತ್ತು ದಾಸೋಹ ಸಿದ್ಧಾಂತ (ಆರ್ಥಿಕ ಬಂಡಾಯ)

ಕಾಯಕವೇ ಕೈಲಾಸ: ದುಡಿಮೆಗೆ ದೈವಿಕ ಸ್ಥಾನ ನೀಡಿ, ಯಾವುದೇ ಕಾಯಕ ಕೀಳಲ್ಲ ಎಂದು ಸಾರುವ ಮೂಲಕ ಶ್ರಮ ಸಂಸ್ಕೃತಿಯನ್ನು ಎತ್ತಿಹಿಡಿದರು.

ಸಂಗ್ರಹ ಬುದ್ಧಿಯ ವಿರೋಧ: ತನಗಾಗುವಷ್ಟು ಮಾತ್ರ ಗಳಿಸಿ, ಉಳಿದಿದ್ದನ್ನು ಸಮಾಜಕ್ಕೆ ಅರ್ಪಿಸುವ 'ದಾಸೋಹ' ಪದ್ಧತಿಯ ಮೂಲಕ ಆರ್ಥಿಕ ಶೋಷಣೆಗೆ ತಡೆ ಹಾಕಿದರು.

5. ಸ್ತ್ರೀ ಸಮಾನತೆ ಮತ್ತು ಸ್ವಾತಂತ್ರ್ಯ

ಲಿಂಗ ತಾರತಮ್ಯದ ಅಳಿವಿಗೆ ಹೋರಾಟ: ಹೆಣ್ಣನ್ನು ಮಾಯೆ ಎನ್ನುವ ಪುರುಷಪ್ರಧಾನ ಧೋರಣೆಯನ್ನು ಧಿಕ್ಕರಿಸಿ, "ಹೆಣ್ಣು ಹೆಣ್ಣಲ್ಲ, ಗಂಡು ಗಂಡಲ್ಲ, ಆತ್ಮನಿಗೆ ಲಿಂಗವಿಲ್ಲ" ಎಂದು ಘೋಷಿಸಿದರು.


ಅನುಭವ ಮಂಟಪದಲ್ಲಿ ಸ್ಥಾನ: ಅಕ್ಕಮಹಾದೇವಿ, ಆಯ್ದಕ್ಕಿ ಲಕ್ಕಮ್ಮ ಮುಂತಾದ ಮಹಿಳಾ ಶರಣೆಯರಿಗೆ ಧಾರ್ಮಿಕ ಮತ್ತು ಸಾಮಾಜಿಕ ಚರ್ಚೆಗಳಲ್ಲಿ ಸಮಾನ ಗೌರವ ನೀಡಲಾಯಿತು.

ಈ ರೀತಿಯಾಗಿ, ವಚನ ಸಾಹಿತ್ಯವು ಕೇವಲ ಸಾಹಿತ್ಯ ಪ್ರಕಾರವಾಗಿರದೆ, ಅಂದಿನ ಯಜಮಾನ ಸಂಸ್ಕೃತಿಯ ವಿರುದ್ಧದ ದೊಡ್ಡ ಬಂಡಾಯವಾಗಿ ಹೊರಹೊಮ್ಮಿತು. ಈ ವೈಚಾರಿಕತೆಯೇ ಆಧುನಿಕ ಕನ್ನಡ ಸಾಹಿತ್ಯದಲ್ಲಿ ದಲಿತ ಮತ್ತು ಬಂಡಾಯ ಸಾಹಿತ್ಯ ಚಳುವಳಿಗೆ ಮುಖ್ಯ ಪ್ರೇರಣೆಯಾಗಿದೆ.

ಶರಣರು ಮಹಿಳಾ ಶಿಕ್ಷಣ ನಿರಕ್ಷ-ರಿಗಳಿಗೆ ವಯೋವೃದ್ಧರಿಗೆ ಅವಕಾಶ ವಂಚಿತರಿಗೆ ಅಕ್ಷರ ಜ್ಞಾನವನ್ನು ನೀಡಿ ವಚನ ಚಳುವಳಿಯಲ್ಲಿ ಅಕ್ಷರ ಕಲಿಸಿದರು. ಇಂತಹ ಅಪೂರ್ವ ಶೈಕ್ಷಣಿಕ ಕ್ರಾಂತಿಯು ಜಗತ್ತಿನ ಯಾವುದೇ ಸಂಸ್ಕೃತಿಯಲ್ಲಿ ಕಾಣುವುದಿಲ್ಲ ಪ್ರೊ ಶಿ ಶಿ ಬಸವನಾಳರು ಕನ್ನಡದ ವಚನಕಾರರು ದೇವ ಭಾಷೆ ಜನ ಭಾಷೆಯಾಗದಿದ್ದಾಗ ಜನ ಭಾಷೆಯನ್ನೇ ದೇವಾ ಭಾಷೆ ಮಾಡಿದರು ಎಂದು ಹೇಳಿದರೆ, ಪ್ರೊ ಶ್ರೀನಿವಾಸಮೂರ್ತಿ ಅವರು ವಚನಕಾರರು ಅಚ್ಚ ಕನ್ನಡದ ಬೇಸಾಯಗಾರರು ಎಂದಿದ್ದಾರೆ. ಜ್ಞಾನಪೀಠ ವಿಜೇತರಾದ ಡಾ ಚಂದ್ರಶೇಖರ ಕಂಬಾರ ಅವರು ದೇವರಿಗೆ ಕನ್ನಡವ ಕಳಿಸಿದರು ಕಲ್ಯಾಣ ಶರಣರು ಎಂದಿದ್ದಾರೆ.

ಹೀಗೆ ವಚನ ಚಳುವಳಿಯು ಕಲ್ಯಾಣ ನಾಡಿನ ಶೈಕ್ಷಣಿಕ ಗುಣಮಟ್ಟವನ್ನು ಎತ್ತ-ರಿಸುವುದು ಮತ್ತು ಎಲ್ಲರಿಗೂ ಅಕ್ಷರ ಶಿಕ್ಷಣ ಅನುಭಾವ ಶಿಕ್ಷಣ ಆರ್ಥಿಕ ನೈತಿಕ ರಾಜ-ಕೀಯ ಪ್ರಜ್ಞೆಯ ಶಿಕ್ಷಣವನ್ನು ಎಲ್ಲರಲ್ಲಿ ಬಿತ್ತುವುದು ಮೂಲ ಉದ್ದೇಶವಾಗಿತ್ತು.

ಲೇಖಕ
■ ಡಾ ಶಶಿಕಾಂತ ಪಟ್ಟಣ.
ರಾಮದುರ್ಗ
ಪುಣೆ ಮೊ: 9552002338



# ಚಂದಿರನಿಗಿಂತ ಚಂದ ನಿನ್ನ ಪ್ರೀತಿಯ ಬಂಧ

■ ಉದಯರಶ್ಮಿ ದಿನಪತ್ರಿಕೆ

ಮುದ್ದಾದ ರೋಹಿಣಿ

ಪ್ರತಿದಿನವೂ ಘಮಘಮಿಸುವ ಮುಂಜಾವಿನ ಹೂವು ನೀನು. ಅಂದು ಮುಸ್ಸಂಜೆ ನದಿ ತೀರದಿ ಪರಮ ಪ್ರೇಮದ ರಮಣೀಯವಾದ ವಾತಾವರಣದಲ್ಲಿ ಯಾವುದೋ ಕಾಣದ ಲೋಕದಿಂದ ಬಂದವಳಂತೆ ಎದುರು ನಿಂತಿದ್ದೆ. ಅಚ್ಚ ಮಲ್ಲಿಗೆಗಿಂತಲೂ ಬೆಳ್ಳಗೆ ಮೈಬಣ್ಣ. ನಾಗರ ಜಡೆಯ ಬೀಸಿಕೊಂಡು, ಗೆಜ್ಜೆ ಶಬ್ದ ಮಾಡಿಕೊಂಡು, ಬಿಂಕದಿ ನೀ ನಡೆಯುತಿ-ರುವಾಗ ನಿನ್ನಂದ ಸೆರೆ ಹಿಡಿಯಲು ಕಣ್ಣೆರಡು ಸಾಲವು ಎಂದೆನಿಸಿತು. ನಿನ್ನವು ಪುಟ್ಟ ಹೆಜ್ಜೆಯಾಗಿದ್ದರೂ ದಿಟ್ಟ ಹೆಜ್ಜೆಯಾಗಿದ್ದವು. ನೀನು ನಡೆದ ದಾರಿಯನ್ನೇ ಕಾಲು ಹಿಂಬಾಲಿಸುತ್ತಿದ್ದವು. ನಿನ್ನ ನಡೆಯ ಸೊಗಸಿನ ಸುಗಂಧ ಪರಿಮಳ ಆಗಲೇ ಮನದಲ್ಲಿ ಮನೆ ಮಾಡಿತ್ತು. ಚಂದದ ಬೆಳದಿಂಗಳು ಹರಡುತ್ತಿತ್ತು.

ಸನಿಹ ನಿಂತು ಮಾತನಾಡುವಷ್ಟು ಸಲಿಗೆ ಇನ್ನೂ ಬೆಳೆದಿರಲಿಲ್ಲ. ದೂರ ನಿಂತು ನಿನ್ನ ನಿಲುವನು ಆಸ್ವಾದಿಸುತ್ತಿದ್ದೆ. ಹಾರುವ ಚಿಟ್ಟೆಗಳ, ಗೂಡಿನ ಹಕ್ಕಿಗಳ ನೋಡುತ ನೀ ಮೈಮರೆತಿದ್ದೆ. ಮುಳುಗುವ ದಿಗಂತದಿ ಸಾಗುವ ಪುಟ್ಟ ದೋಣಿಯತ್ತ ನಿನ್ನ ಚಿತ್ತ ಹರಿದಿತ್ತು. ನನ್ನ ಚಿತ್ತ ಮಾತ್ರ ನಿನ್ನತ್ತಲೇ ಇತ್ತು. ಮೋಹದಿಂದ ನಿನ್ನತ್ತ ವಾಲುತ್ತಲೇ ಇತ್ತು. ಉಸಿರಾಡುವ ಗೊಂಬೆಯನ್ನು ಎರಕ ಹೊಯ್ದ ಆ ದೇವನನ್ನು ಸ್ತುತಿಸುತ್ತಿತ್ತು. ನನಗಾಗಿಯೇ ಇವಳನ್ನು ಮೀಸಲಿಡು ಎಂದು ಬೇಡುತ್ತಿತ್ತು.

ಕೊರಳಲ್ಲಿನ ನಾಜೂಕಾದ ಚಿಕ್ಕ ಚೈನು ನೀಳವಾದ ಕತ್ತನ್ನು ಅಲಂಕರಿಸಿ ರತ್ನದ ಹರಳಿನ ಹಾರವೆಂಬಂತೆ ಬೀಗುತ್ತಿತ್ತು. ತುಟಿ ಬಿಡಿಸಿದ ಮುಗುಳುನಗೆ ಹೊಮ್ಮಿದರೆ ಅದೊಂದು ಬಂಗಾರದ ಹೊಳಪಿನಂತಿತ್ತು. ದೇವಲೋಕದ ಅಪ್ಸರೆ ಬೇರೆ ಅಲ್ಲ ನೀನು ಬೇರೆ ಅಲ್ಲ ಎಂಬ ಭಾವದಂತೆ. ನಿನ್ನ ಕಣ್ತುಂಬಿಸಿಕೊಳ್ಳುವುದೇ ದಿವ್ಯ ಆನಂದ ಎಂದೆನಿಸಿತ್ತು. ಹೂ ಬಿರಿದ ದಿಕ್ಕಿನಿಂದ ಬಂದವಳೇನೋ ಇವಳು ಎಂದು ಮನ ಕೇಳುತ್ತಿತ್ತು. ನೀನೇ ನನ್ನ ಮುದ್ದು ಹುಡುಗಿ ನೀನೇ ನಿನ್ನ ಮನದರಸಿ ಎಂದು ಮನಸ್ಸು ಹಾಡುತ್ತ ಕುಣಿಯುತ್ತಿತ್ತು. ಮುಗ್ಧ ನೋಟ ಮುದ್ದಾದ ನಗುವಿಗೆ ಮನಸ್ಸು ಒಪ್ಪಿಯಾಗಿ-ತ್ತು ನೀನೇ ನನ್ನ ಚಿನ್ನ ನನ್ನ ರನ್ನ ಎಂದು ಹೇಳಲು ತುದಿಗಾಲಲ್ಲಿ ನಿಂತಿದ್ದೆ. ಅನುರಾಗದ ಅಲೆಗಳು ಮುತ್ತಾಗಿ ಮರಳಿ ಬರುತ್ತವೆ ಎಂದುಕೊಂಡೆ ಮನೆಗೆ ಮರಳಿದ್ದೆ.

ಈ ರೂಪಸಿಯನ್ನು ನನ್ನ ಶೋಡಸಿಯನ್ನಾಗಿಸಬೇಕು ಎನ್ನುವ ಬಯಕೆ ಹಗಲು ರಾತ್ರಿ ಕಾಡುತ್ತಿತ್ತು. ಅದೊಂದು ದಿನ ಅವ್ವನಿಗೆ ಔಷಧಿ ತರಲೆಂದು ಬಸ್ಸಿಗಾಗಿ ಕಾಯುತ್ತಿದ್ದೆ. ವಯಸ್ಸಾದ



ಅಜ್ಜಿಯನ್ನು ರಸ್ತೆ ದಾಟಿಸಿ ನನ್ನ ಬಳಿ ಬಂದು ನಿಂತೆ. ನಿನ್ನ ಆಗ ಕಂಡು ನೀ ಕರುಣಾಮಯಿ ಎಂದೆನಿಸಿ ಮಾತೆಗೆಳೆದೆ. ಅದೇ ಸಮಯಕ್ಕೆ ಗೊತ್ತಾಯಿತು. ವಾಚನಾಲಯದಲ್ಲಿ ಹೊಸದಾಗಿ ಬಂದ ಗ್ರಂಥಪಾಲಕಿ ನೀನೆಂದು. ಹುಡುಕುವ ಬಳ್ಳಿ ಕಾಲಿಗೆ ತೊಡರಿದಂತೆ ನನಗೆ ಓದಿ ನೌಕರಿ ಪಡೆಯಲೇಬೇಕಿತ್ತು.

ಅಪ್ಪನಿಲ್ಲದ ಮಗನಿಗೆ ಅವ್ವನೇ ಅಪ್ಪನಾಗಿದ್ದು.



ಅನಾಥಭಾವ ಎಂದೂ ಕಾಡಲು ಬಿಡಲಿಲ್ಲ. ಗಂಡನಿಲ್ಲದ ಬದುಕಿನಲ್ಲಿ ಸಂಬಂಧಿಗಳ ಅನುಮಾನ ಅವಮಾನದಿಂದ ಜರ್ಜರಿತಳಾಗದೇ ನನಗಾಗಿ ನಗು ಹೊತ್ತು ಬದುಕಿದವಳು. ಒಡೆದ ಗಾಜಿನ ಬಿರುಕಿನಂತೆ ಆಕೆಯ ಮನದಲ್ಲಾದ ಬಿರುಕನ್ನು ಎಂದೂ ಕಾಣದಂತೆ ಬದುಕಿದವಳು. ಮಾತುಗಳಿಗೆ ಗಾಯಗೊಳಿಸುವ ಶಕ್ತಿಯಿದೆ ಮಾತಿನಿಂದಾದ ಗಾಯಕ್ಕೆ ಮುಲಾಮಿಲ್ಲ ಎಂದೆಲ್ಲ ಕಂಡ ಅವ್ವ ಮೌನಕ್ಕೆ ಶರಣಾಗಿದ್ದಳು. ಜೀವನದುದ್ದಕ್ಕೂ ನೋವು ನುಂಗಿ ಕಷ್ಟ ಸಹಿಸಿದ ಅಮ್ಮ ಈಗಲಾದರೂ ಉಪ್ಪರಿಗೆಯಲ್ಲಿರಲಿ ಎಂದು ದೈವಕ್ಕೆ ಅಂಗಲಾಚುತ್ತಿದ್ದ ದಿನಗಳವು. ಜೀವನ ಉಪ್ಪಿಲ್ಲದ ಊಟವಾದಂತೆ ಆಗಿತ್ತು.

ಮನೆಗೆ ಬಂದಾಗಲೆಲ್ಲ ನೀ ಹೇಳುವ ಮಾತಿನಿಂದ ಅವ್ವನ ಮುಖದಲ್ಲಿ ಏನೋ ಗೆಲುವು ಕಾಣುತ್ತಿತ್ತು. ಗೋಡೆಯ ಮೂಲೆಯಲ್ಲಿ ಮೌನವಾಗಿ ಕುಳಿತುಕೊಳ್ಳುತ್ತಿದ್ದ ನನ್ನವ್ವ ನೋವು ಮರೆತು ಮಾತಿಗಿಳಿಯುವಂತೆ ಮಾಡಿದೆ. ಹಡೆದವ್ವ ಉತ್ಸಾಹದಿಂದ ಇರುವುದ ಕಂಡು ಹೊನ್ನಿನ ರಾಶಿ ಸಿಕ್ಕಷ್ಟು ಖುಷಿಯಾಯಿತು. ಶುದ್ಧ ಜಲದಂತಿದ್ದ ನಿನ್ನ ಸ್ನೇಹ ವರವೆನಿಸಿತು. ಕಷ್ಟಕ್ಕೆ ಬರದ ಸಂಬಂಧಗಳು ನಿರರ್ಥಕವಾದವುಗಳು. ಕಷ್ಟಕ್ಕೆ ಬರುವ ನಿನ್ನಂತಹ ಪುಟ್ಟ ಸಂಬಂಧವೇ ಮಿಗಿಲು ಎನಿಸಿತು. ಬಸವಳಿದ ಬದುಕಿಗೆ ದಾರಿದೀಪವಾದೆ. ಕತ್ತಲೆಯ ಹಾದಿಯಲ್ಲಿ ಕೈ ಹಿಡಿದು ನಡೆಸಿದೆ.

ಎಳೆ ಬಿಸಿಲ ಮಳೆಬಿಲ್ಲು ಎನಿಸಿದೆ. ಎದೆಯ ಆಲಾಪನೆಯನ್ನು ಆಲಿಸಿದೆ. ಕನಸಿನ ಭಾವವಾಗಿ ಅರಳಿದೆ. ಪ್ರೀತಿಯ ದೀಪ ಹಚ್ಚಿದೆ. ಮೆಲ್ಲಮೆಲ್ಲನೆ ನಲ್ಲೆಯಾದೆ.. ಕೊನೆಯವರೆಗೂ ನಿನ್ನೊಲವಿನ ಆಸರೆಯ ನೆರಳಿನಲ್ಲಿ ಸಾಗುವಾಸೆ ಹುಟ್ಟಿಸಿದೆ. ಎಂದೂ ಕವನ ಗೀಚಿದವನಲ್ಲ ಆದರೆ ನಿನ್ನೊಲವು ನನ್ನನ್ನು ಕವಿ ಮಾಡಿದೆ. 'ಹೃದಯ ಕದ್ದ ಚೋರಿ ನೀನೆ ಚೆಲುವೆ. ನಿನ್ನ ತಾಳಕ್ಕೆ ಕುಣಿವೆ ಒಲವೆ.' ಎಂದೆಲ್ಲ ಅನುರಾಗದ ಕವನ ರಚಿಸಲು ಪ್ರೇರೇಪಿಸಿದೆ. ದುಃಖದ ಕಾವು ಕಂಡ ನನಗೆ ಸುಖದ ತಂಪು ಅರಿವಾಯಿತು. ಒಂದೇ ನೆರಳಲಿ ಬಾಳುವಾಸೆ ತಂದಿತು.

ನನಗೆ ಬೇಕಾದ ಪುಸ್ತಕಗಳನ್ನು ನೀನೇ ಮುತುವರ್ಜಿಯಿಂದ ತೆಗೆದಿರಿಸಿ ಕೊಡುವುದ ಕಂಡು ಇವಳೆಷ್ಟು ಸುಂದರಿಯೋ ಅಷ್ಟೇ ಒಳ್ಳೆಯವಳು ಎನ್ನುತ್ತಿತ್ತು ಮನಸ್ಸು. ನಿನ್ನ ನೆರವಿನ ಬಲದಿಂದ ಆರಂಕಿಯ ಕೆಲಸವೊಂದು ಭಾಗ್ಯದ ಬಾಗಿಲು ತೆರೆಸಿತು. ಕೋಟಿ ಜನ್ಮದ ಪುಣ್ಯವೇನೋ ಸೋತು ಕುಳಿತಾಗ ನಿನ್ನ ಸ್ನೇಹ ಸಿಂಚನ ಬದುಕಿನಲ್ಲಿ ಗೆಲುವು ತಂದಿತು. ನೀ ಸಿಕ್ಕ ಮೇಲೆ ನೋವು ನಲಿವಿನ ಹೂವಾಯಿತು. ಹೃದಯ ಪ್ರೇಮದ ಗೀತೆಯಾಗಿ ಮೊಳಗಿತು. ಒಲವಿನ ಬೇರು ಬೇರೂರಿದ ಕ್ಷಣವದು. ಬದುಕು ಹೂವಾಯಿತು.

ಇಬ್ಬರೂ ಭೇಟಿಯಾಗಬೇಕೆಂದು ನಿಶ್ಚಯಿಸಿದ್ದ ಸಂಜೆ ಅದು. ಅಪರೂಪದ ರೂಪವೊಂದು ಮುಸ್ಸಂಜೆಯ ಮೃದುವಾದ ತಂಗಾಳಿಯಂತೆ ಬಳಿ



ಬರುವುದ ಕಂಡು ಮೂಕವಿಸ್ಮಿತನಾಗಿದ್ದೆ. ಸಿನಿತಾರೆ ಕಣ್ಮುಂದೆ ಬಂದಂತೆನಿಸಿ ಮೈ ಮರೆತಿದ್ದೆ. ನಿನ್ನ ಕಣ್ಣನೋಟದ ಹೊಳಪಿಗೆ ನೀಲಿ ಗಗನದಲ್ಲಿ ಚಂದಿರ ನಾಚಿ ಹೊಳೆಯುವುದನ್ನೇ ಮರೆತಿದ್ದ. ಚುಕ್ಕಿಗಳ ಬೆಳಕಿನಲ್ಲಿ ಬಳ್ಳಿಯ ಹೂವೊಂದು ಪಕ್ಕದ ಮರವ ಅಪ್ಪಿಕೊಳ್ಳುವ ದೃಶ್ಯ ಕಂಡು ಮನದಲ್ಲಿ ಆಸೆ ಚಿಮ್ಮಿತ್ತು. ಮಾತುಗಳೇ ಇಲ್ಲದ ಮೌನದಲ್ಲೂ ಭಾವನೆಗಳನ್ನು ಅರಿವ ಜೀವ ಪಕ್ಕದಲ್ಲಿದೆ ಎಂದು ಒಳಮನಸ್ಸು ಒತ್ತಿ






ಒತ್ತಿ ಹೇಳುತ್ತಿತ್ತು. ನನ್ನೊಳಗೆ ಪ್ರೀತಿಯ ಅಲೆಯೊಂದು ಮೌನವಾಗಿ ಹೊಳೆದಿತ್ತು. ಹುಡುಕುತ್ತಿದ್ದ ಅಕ್ಕರೆಯ ಅನುರಾಗದ ಅಲೆ ಜೋಡಿಯಾಗುವುದು ಎದೆಯಲಿ ಬೆರೆಯುವುದೆಂದು ಎದೆ ನಂಬಿತ್ತು.

ತಂಪಾದ ತಂಗಾಳಿ ಮೆಲ್ಲನೆ ಬೀಸುತ್ತ ದೇಹವನ್ನು ತೀಡುತ್ತಿತ್ತು. ನೀನು ನಾಚಿಕೆಯಿಂದ ನಿನ್ನ ಮುಂಗುರುಳನ್ನು ಕಿವಿಯ ಹಿಂದೆ ಸರಿಸಿದಾಗ ನಿನ್ನ ಕೈ ಬೆರಳುಗಳು ನನಗೆ ತಾಗಿದವು. ಆ ಒಂದು ಸಣ್ಣ ಸ್ಪರ್ಷ ದೇಹದಲ್ಲಿ ಮಿಂಚಿನಂತೆ ಸಂಚರಿಸಿತು. ಏರಿದ ಎದೆ ಬಡಿತ ಇಬ್ಬರಿಗೂ ಕೇಳುತ್ತಿತ್ತು. ಮಾತಿಲ್ಲದೇ ಇಬ್ಬರ ಕೈಗಳು ಒಂದನ್ನೊಂದು ಅಪ್ಪಿಕೊಂಡು ಒಂದಾದವು. ಒಂದಾದ ಖುಷಿಯಲ್ಲಿ ಕೆನ್ನೆ ಕಣ್ಣು ತುಟಿ ಸವ-ರಿಕೊಂಡವು. ನಾವೂ ಇದರಲ್ಲಿ ಪಾಲ್ಗೊಳ್ಳಬೇಕೆಂದು ಅಧರಗಳು ಮುಂದಾದವು. ಕೆಲ ಹೊತ್ತು ಜೇನು ಸವಿದು ಒಲ್ಲದ ಮನಸ್ಸಿನಿಂದ ಬೇರಾದವು.

ಬರೆಯಬೇಕೆಂದ ಸಾಲುಗಳು ಲೆಕ್ಕಕ್ಕಿಲ್ಲ. ಅವು ನನ್ನ ಹೆದರಿಕೆಗೆ ಹೆದರಿ ಕರಗಿ ಹೋಗಲಿಲ್ಲ. ಕಾಲದ ಸಹಜ ಓಟದ ಹರಿವಿಗೆ ಸಿಗಲಿಲ್ಲ. ಮನಮೋಹಕ ಚಿತ್ರಗಳಾಗಿ ಕಣ್ಣಲ್ಲಿ ಇಂದಿಗೂ ಉಳಿದಿವೆ ಎಲ್ಲ. ನೆನಪುಗಳು ಎದೆಯಲ್ಲಿ ತೇಲುತ್ತಿವೆ. ತುಟಿಯ ತುದಿಗಳಲಿ ಜೇನ ಹನಿಗಳ ನನಗಾಗಿಯೇ ಕಾಪಿಟ್ಟಿರುವೆ.. ಬಂದು ಬಿಡು ಸರಸದ ಮಂಚಕೆ ಕಾದಿರುವೆ ಮೈಮೇಲೆ ಜೇನಹೊಳೆ ಹರಿಸಲು. ಅಧರದ ಅಮೃತವ ಸಾಲವಾಗಿ ಪಡೆದು ಬಡ್ಡಿ ಸಮೇತ ಕೊಡಲು. ನನ್ನ ಮುದ್ದಿನ ಮಕ್ಕಳ ಮಮತೆಯ ತಾಯಿಯಾಗಲು.

ನಿನ್ನ ಮುದ್ದಿನ ರೋಹಿತ

ಲೇಖಿನ
– ಜಯಶ್ರೀ.ಜೆ. ಅಬ್ಬಿಗೇರಿ.
ಇಂಗ್ಲೀಷ್ ಉಪನ್ಯಾಸಕರು
ಬೆಳಗಾವಿ
ಮೊ: 9449234142



## ಕಾಂಗ್ರೆಸ್ ಕಚೇರಿಗೆ ಮುತ್ತಿಗೆಶಾಸಕ ಜಾಧವ್ ಸೇರಿ ಹಲವರು ಸೆರೆ

ಕಲಬುರಗಿ: ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದ ವೇಳೆ ಬಿಜೆಪಿ ಶಾಸಕ ಡಾ.ಅವಿನಾಶ್ ಜಾಧವ್, ಮಾಜಿ ಶಾಸಕ ದತ್ತಾತ್ರೇಯ ಪಾಟೀಲ್ ರೇವೂರ ಗ್ರಾಮಾಂತರ ಜಿಲ್ಲಾಧ್ಯಕ್ಷ ಅಶೋಕ್ ಬಗಲಿ, ಅಮರನಾಥ್ ಪಾಟೀಲ್, ಶರಣಪ್ಪ ತಳವಾರ ಸೇರಿ ಹಲವು ಬಿಜೆಪಿ ಮುಖಂಡರು ಕಾರ್ಯಕರ್ತರನ್ನು ನಗರ ಪೊಲೀಸರು ಬಂಧಿಸಿದ್ದಾರೆ.

ಬಿಜೆಪಿ ಕಾರ್ಯಕರ್ತರು ಕಾಂಗ್ರೆಸ್ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಪ್ರತಿಭಟನೆ ನಡೆಸಿ, ಬಳಿಕ ಕಾಂಗ್ರೆಸ್ ಕಚೇರಿಯತ್ತ ಮುತ್ತಿಗೆ ಹಾಕಲು ಮುಂದಾದರು. ಈ ವೇಳೆ ಪರಿಸ್ಥಿತಿ ನಿಯಂತ್ರಿಸಲು ಪೊಲೀಸರು ಮಧ್ಯಪ್ರವೇಶಿಸಿ ಪ್ರತಿಭಟನಾಕಾರರನ್ನು ತಡೆದರು. ನಂತರ ಪ್ರಮುಖ ಮುಖಂಡರು ಹಾಗೂ ಕಾರ್ಯಕರ್ತರನ್ನು ಬಂಧಿಸಿ ಸ್ಟೇಷನ್ ಬಜಾರ್ ಪೊಲೀಸರು ಪೊಲೀಸ್ ವಾಹನಗಳಲ್ಲಿ ಕರೆದೊಯ್ದರು.

ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ತಮ್ಮ ಪ್ರತಿಭಟನೆ ಪ್ರಜಾಪ್ರಭುತ್ವದ ಹಕ್ಕಿನ ಭಾಗವಾಗಿದ್ದು, ಸರ್ಕಾರ ವಿರೋಧದ ಧ್ವನಿಯನ್ನು ಹತ್ತಿಕ್ಕಲು ಯತ್ನಿಸುತ್ತಿದೆ ಎಂದು ಆರೋಪಿಸಿದರು. ಪ್ರತಿಭಟನೆಯ ಹಿನ್ನೆಲೆ ಕಾಂಗ್ರೆಸ್ ಕಚೇರಿ ಸುತ್ತಮುತ್ತ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಕೆಲಕಾಲ ಆ ಪ್ರದೇಶದಲ್ಲಿ ಉದ್ವಿಗ್ನ ವಾತಾವರಣ ನಿರ್ಮಾಣ ವಾಗಿದ್ದರೂ, ಪೊಲೀಸರು ಪರಿಸ್ಥಿತಿ ಯನ್ನು ನಿಯಂತ್ರಣದಲ್ಲಿಟ್ಟರು.

## ದೇ.ಗಾಣಗಾಪೂರ; ಟಂ-ಟಂ ಚಾಲಕನ ಭೀಕರ ಹತ್ಯೆ

ಕಲಬುರಗಿ:ಕೇವಲ “ದಿಟ್ಟಿಸಿ ನೋಡಿದ' ಸಣ್ಣ ವಿಚಾರವೇ ನೆಪವಾಗಿ ಇಟ್ಟುಕೊಂಡು ಟಂ-ಟಂ ಚಾಲಕನಾಗಿದ್ದ 19 ವರ್ಷದ ಯುವಕನೋರ್ವನನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಭೀಕರವಾಗಿ ಹತ್ಯೆ ಮಾಡಿರುವ ಘಟನೆ ಅಫಜಲಪುರ ತಾಲ್ಲೂಕಿನ ಪ್ರಸಿದ್ಧ ಯಾತ್ರಾ ಸ್ಥಳವಾದ ದೇವಲಗಾಣಗಾಪುರದಲ್ಲಿ ನಡೆದಿದೆ. ಈ ಘಟನೆ ಗ್ರಾಮದ ಜನತೆಯನ್ನು ಬೆಚ್ಚಿ ಬೀಳಿಸಿದೆ.

ಶುಕ್ರವಾರ ನಸುಕಿನ ಜಾವ 2:17 ರ ಸುಮಾರಿಗೆ ದೇವಲ ಗಾಣಗಾಪುರದ ಸಂಗಮ ರಸ್ತೆಯಲ್ಲಿರುವ ಅವಧೂತ ಆಶ್ರಮದ ಸಮೀಪ ಈ ಕ್ರೌರ್ಯ ನಡೆದಿದೆ. ಗ್ರಾಮದ ದತ್ತು (19) ಎಂಬ ಟಂ-ಟಂ ಚಾಲಕ ಹತ್ಯೆಯಾದ

ದುರ್ದೈವಿಯಾಗಿದ್ದಾನೆ. ದತ್ತು ಮೇಲೆ ಅದೇ ಗ್ರಾಮದ ಪ್ರಜ್ವಲ್ ಮಲ್ಕಪ್ಪ ಹೊಸಮನಿ ಹಾಗೂ ಪ್ರೀತಮ್ ಹೊಸಮನಿ ಎಂಬಿಬ್ಬರು ದಾಳಿ ನಡೆಸಿ ಮಾರಕಾಸ್ತ್ರಗಳಿಂದ ತೀವ್ರವಾಗಿ ಹಲ್ಲೆ ನಡೆಸಿದ್ದಾರೆ.

ಘಟನೆಯಲ್ಲಿ ಗಂಭೀರವಾಗಿ ಗಾಯಗೊಂಡು ರಕ್ತದ ಮಡುವಿನಲ್ಲಿ ಬಿದ್ದಿದ್ದ ದತ್ತು ಅವರನ್ನು ತಕ್ಷಣವೇ ಕಲಬುರಗಿಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಅವರು ಕೊನೆಯುಸಿರೆಳೆದಿದ್ದಾರೆ.



## ಬೀದರ-ಧರ್ಮಾಪುರ ಮಾರ್ಗಕ್ಕೆ ಬಸ್ ಕಲ್ಪಿಸಲು ಒತ್ತಾಯ

ಬೀದರ: ಬೀದರ-ಧರ್ಮಾಪುರ ಮಾರ್ಗದಲ್ಲಿ ಸಂಚರಿಸುವ ಕೆಎಸ್‌ಆರ್‌ಟಿಸಿ ಬಸ್‌ಗಳು ನಿಗದಿತ ಸಮಯ ಪಾಲನೆ ಮಾಡುತ್ತಿಲ್ಲ. ಇದರಿಂದ ಚಿಂತಲಗೇರಾ, ಬರೂರ್, ಘೌಸಪೂರ ಹಾಗೂ ಧರ್ಮಾಪುರ ಗ್ರಾಮಗಳ ವಿದ್ಯಾರ್ಥಿಗಳು, ಉದ್ಯೋಗಿಗಳು, ರೈತರು ಮತ್ತು ಸಾರ್ವಜನಿಕರು ಪ್ರತಿನಿತ್ಯ ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ ಎಂದು ಕರ್ನಾಟಕ ರಾಜ್ಯ ಕನ್ನಡಿಗರ ವೇದಿಕೆ ಆರೋಪಿಸಿದ್ದಾರೆ.

ಈ ಕುರಿತು ಬೀದರಕೆಎಸ್‌ಆರ್‌ಟಿಸಿ ಡೆಪೊ ವ್ಯವಸ್ಥಾಪಕರಿಗೆ ಸಲ್ಲಿಸಿದ ಮನವಿಯಲ್ಲಿ, ಈಗಿರುವ ಬಸ್‌ಗಳಲ್ಲಿ ಅತಿಯಾದ ಜನಸಂದಣಿ ಇರುವುದರಿಂದ ಪ್ರಯಾಣಿಕರು ನಿಂತುಕೊಂಡೇ ಪ್ರಯಾಣಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಮಹಿಳೆಯರು, ಹಿರಿಯ ನಾಗರಿಕರು ಹಾಗೂ ವಿದ್ಯಾರ್ಥಿಗಳು ಹೆಚ್ಚಿನ ಸಮಸ್ಯೆ ಎದುರಿಸುತ್ತಿದ್ದಾರೆ ಎಂದು ತಿಳಿಸಲಾಗಿದೆ.

ಬೀದರ-ಧರ್ಮಾಪುರ ಮಾರ್ಗದಲ್ಲಿ ಬಸ್‌ಗಳನ್ನು ನಿಗದಿತ ವೇಳಾಪಟ್ಟಿಯಂತೆ ಸಂಚರಿಸುವಂತೆ ಕ್ರಮ ಕೈಗೊಳ್ಳಬೇಕು. ಜೊತೆಗೆ ಚಿಂತಲಗೇರಾ-ಬರೂರ್-ಘೌಸಪೂರ -ಧರ್ಮಾಪುರ ಮಾರ್ಗಕ್ಕೆ ಪ್ರತ್ಯೇಕ ಹೊಸ ಕೆಎಸ್‌ಆರ್‌ಟಿಸಿ ಬಸ್ ಮಂಜೂರು ಮಾಡಿ ನಿಯಮಿತ ಸಂಚಾರ ವ್ಯವಸ್ಥೆ ಕಲ್ಪಿಸಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ.ಇದಲ್ಲದೆ, ಪ್ರಯಾಣಿಕರ ಸಂಖ್ಯೆ ಹೆಚ್ಚಿರುವ ವೇಳೆಯಲ್ಲಿ ಹೆಚ್ಚುವರಿ ಬಸ್‌ಗಳ ವ್ಯವಸ್ಥೆ ಮಾಡಬೇಕು ಹಾಗೂ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಬಸ್ ವೇಳಾಪಟ್ಟಿಯನ್ನು ಮರುನಿಗದಿಪಡಿಸಿ ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕು ಎಂದು ಒತ್ತಾಯಿಸಲಾಗಿದೆ.

ಕರ್ನಾಟಕ ರಾಜ್ಯ ಕನ್ನಡಿಗರ ವೇದಿಕೆಯ ರಾಜ್ಯ ಉಸ್ತುವಾರಿ ಹಾಗೂ ಬೀದರ ಜಿಲ್ಲಾಧ್ಯಕ್ಷ ಶ್ರೀ ಕೇತನ್ ಪಾಟೀಲ ಹಾಗೂ ಯುವ ಘಟಕದ ಅಧ್ಯಕ್ಷ ಸಾಯಿ ಕುಮಾರ( ಬೀದರ ದಕ್ಷಿಣ) ಅವರು ಸಾರ್ವಜನಿಕರ ಹಿತದೃಷ್ಟಿಯಿಂದ ಮನವಿಯನ್ನು ಪರಿಗಣಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಕೆಎಸ್‌ಆರ್‌ಟಿಸಿ ಅಧಿಕಾರಿಗಳನ್ನು ವಿನಂತಿಸಿದ್ದಾರೆ.

ಈ ಸಂದರ್ಭದಲ್ಲಿ ವಿಶ್ಯಾರ್ಥಿಗಳಾದ ಎಲ್ಲಮಾ, ಕೀರ್ತನ, ರಾಧಿಕಾ, ಅನೀತಾ, ಅಖೀಲ, ಕಾಶಿನಾಥ, ಸಂಗಮೇಶ, ಶಶಿಕಾಂತ, ಪುಂಡಲೀಕ ಹಾಗೂ ಮಂಜುನಾಥ ಇದ್ದರು.

## ಕುಖ್ಯಾತ ಮನೆಗಳ್ಳನ ಬಂಧನ: 20 ಲಕ್ಷ ರೂ.ಮೌಲ್ಯದ ಚಿನ್ನಾಭರಣ ಜಪ್ತಿ

ಕಲಬುರಗಿ:ಅಶೋಕನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ 2 ಮನೆ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಕುಖ್ಯಾತ ಮನೆಗಳ್ಳನನ್ನು ಬಂಧಿಸಿ 20 ಲಕ್ಷ ರೂ. ಮೌಲ್ಯದ 117 ಗ್ರಾಂ.ಬಂಗಾರದ ಆಭರಣವನ್ನು ಜಪ್ತಿ ಮಾಡುವಲ್ಲಿ ಅಶೋಕ ನಗರ ಪೊಲೀಸರು ಯಶಸ್ವಿಯಾಗಿದ್ದಾರೆ ಎಂದು ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ.ತಿಳಿಸಿದರು.



ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಶೋಕ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ಮನೆ ಕಳ್ಳತನ ಪ್ರಕರಣ ಪತ್ತೆಗೆ ಡಿಸಿಪಿಗಳಾದ ಶಾಲೂ, ಪ್ರವೀಣ್ ನಾಯಕ್ ಅವರ ಮಾರ್ಗದರ್ಶನದಲ್ಲಿ ಕಲಬುರಗಿ ದಕ್ಷಿಣ ಉಪ-ವಿಭಾಗದ ಸಹಾಯಕ ಪೊಲೀಸ್ ಆಯುಕ್ತ ಶರಣಬಸಪ್ಪ ಸುಬೇದಾರ, ಅಶೋಕನಗರ ಪೊಲೀಸ್ ಠಾಣೆ ಪಿಐ ಸತೀಶ ಕಣಿಮೇಶ್ವರ ಅವರ ನೇತೃತ್ವದಲ್ಲಿ ಸಿಬ್ಬಂದಿಗಳಾದ ವೈಜಿನಾಥ,ಮಲ್ಲಿಕಾರ್ಜುನ ಮೇತ್ರೆಮ ಶಿವಪ್ರಕಾಶ, ಮುಜಾಹಿದ್, ಕರಣ್, ನೀಲಕಂಠರಾಯ ಪಾಟೀಲ, ಚಂದ್ರಶೇಖರ್, ಹರಿಕಿಶೋರ, ಶ್ರೀಕಾಂತ, ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯ ಪ್ರಭಾಕರ, ಶಿವಲಿಂಗ, ಸಿಡಿಆರ್ ಸೆನ ಚನ್ನವೀರೇಶ್ ಅವರನ್ನು ಒಳಗೊಂಡ ತಂಡ ರಚಿಸಲಾಗಿತ್ತು. ಈ ತಂಡ ತನಿಖೆ ನಡೆಸಿ ತೆಲಂಗಾಣ ರಾಜ್ಯದ ವರಂಗಲ ಸೈಯದ್ ಹಮೀದ್ ತಂದೆ ಸೈಯದ್ ಮೆಹಬೂಬ್ ಅಲಿ (46) ಎಂಬಾತನನ್ನು ಬಂಧಿಸಿ 20 ಲಕ್ಷ ರೂ.ಮೌಲ್ಯದ 117 ಗ್ರಾಂ.ಬಂಗಾರದ ಆಭರಣಗಳನ್ನು ಜಪ್ತಿ ಮಾಡಿ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ ಎಂದು ತಿಳಿಸಿದರು.

ಎರಡು ಮನೆ ಕಳ್ಳತನ ಪ್ರಕರಣಗಳನ್ನು ಪತ್ತೆ ಹಚ್ಚಿ ಕುಖ್ಯಾತ ಕಳ್ಳನನ್ನು ಬಂಧಿಸುವಲ್ಲಿ ಯಶಸ್ವಿಯಾಗಿರುವ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಕಾರ್ಯವನ್ನು ಅವರು ಶ್ಲಾಘಿಸಿದರು.

## ಪರಿಸರ ಹಾಳಾದ ಕಾರಣ ಮಳೆ ಹೋಗಿವೆ:ವಿಜಯಕುಮಾರ ರೋಣದ

ಕಲಬುರಗಿ:“ಯಾತಕ್ಕ ಮಳೆ ಹೋದವೋ” ಎಂಬ ವಿಷಯದ ಮೇಲೆ ವಿಜಯಕುಮಾರ್ ರೋಣದ ಅವರು ಪರಿಸರ ಹಾಳಾದ ಕಾರಣವೇ ಮಳೆ ಹೋಗಿವೆ. ಆ ಕಾರಣ ಪರಿಸರ ಸಂರಕ್ಷಣೆಯ ಬಗ್ಗೆ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದರು. ಅದರಲ್ಲಿ ಮುಖ್ಯವಾಗಿ ನಿಸರ್ಗ ಪ್ರೇಮ ಬೆಳೆಸಿಕೊಳ್ಳುವುದು, ಗಿಡ ಮರ ಹೆಚ್ಚು ಬೆಳೆಸುವುದು, ಹೂದೋಟ ನಿರ್ಮಾಣ, ಮಾಲಿನ್ಯ ನಿಯಂತ್ರಣ, ಶಕ್ತಿ ಬಳಕೆಯಲ್ಲಿ ಮಿತವ್ಯಯ, ವನಮಹೋತ್ಸವ ಆಚರಣೆ, ಇತ್ಯಾದಿ ಅಂಶಗಳನ್ನು ಹೇಳುತ್ತಾ ಪರಿಸರ ಪ್ರೇಮಿ ಸುಂದರ್ಲಾಲ್ ಬಹುಗುಣ, ಪರಿಸರ ವಿಜ್ಞಾನಿ ನಾಗೇಶ್ ಹೆಗಡೆ, ಗಿಡ ಮರಗಳನ್ನು ಮಕ್ಕಳಂತೆ ಬೆಳೆಸಿದ ಸಾಲುಮರದ ತಿಮ್ಮಕ್ಕ, ನರ್ಮದಾ ಬಚಾವೋ ಚಳುವಳಿಯ ರೂವಾರಿ ಮೇಧಾ ಪಾಟ್ಕರ್, ಚಲನಚಿತ್ರ ನಿರ್ದೇಶಕ ಸುರೇಶ್ ಹೆಬ್ಳಿಕರ್ ಇವರನ್ನು ಸ್ಮರಿಸಿದರು. ನಗರದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಮೂಲಕ ಚಕೋರ ಸಾಹಿತ್ಯ ವೇದಿಕೆ ಅಡಿಯಲ್ಲಿ ನಡೆದ ಸಮಾರಂಭದಲ್ಲಿ ಅವರು ಮಾತನಾಡಿದರು.



ಡಾ.ಗವಿಸಿದ್ದಪ್ಪ ಹೆಚ್ ಪಾಟೀಲ್ ಅವರು ಪ್ರಾಸ್ತಾವಿಕ ಮಾತಾಡಿ ಸ್ವಾಗತಿಸಿದರು. ಮತ್ತು ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯರಾದ ಡಾ.ಸಿದ್ಧರಾಮ ಹೊನ್ಕಲ್ ಅವರು ಆಶಯ ನುಡಿಗಳನ್ನು ಆಡಿ ವಿದ್ಯಾರ್ಥಿಗಳು ಪರಿಸರ ಪ್ರೇಮ ಬೆಳೆಸಿಕೋಬೇಕು. ತಮ್ಮ ಮನೆಯ ಸುತ್ತ ಮುತ್ತಲಿನಲ್ಲಿ ಗಿಡಗಳನ್ನು ಬೆಳೆಸಬೇಕು. ವಿದ್ಯಾರ್ಥಿಗಳು ಕೈಯಲ್ಲಿ ಇರುವ ಮೊಬೈಲ್ ಮತ್ತು ಮನೆಯಲ್ಲಿ ಇರುವ ಟಿವಿಯಲ್ಲಿ ಬರುವ ಕೆಟ್ಟ ರೀಲ್ಸಗಳನ್ನು ನೋಡಿ ಮನಸು ವಿಕಾರ ಮಾಡಿಕೋ ಬಾರದು. ಅವರು ನೈತಿಕತೆ ಬೆಳೆಸುವ ಬಸವಾದಿ ಶರಣರ ಹಾಗೂ ಇತರೇ ಲೇಖಕರ ಸಾಹಿತ್ಯ ಕೃತಿಗಳನ್ನು ಓದಬೇಕು. ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಲು ಕರೆ ನೀಡಿದರು. ಕಾಲೇಜಿನ ಪ್ರಾಂಶುಪಾಲರಾದ ಜಡ್ ಎನ್ ಜಾಗಿರ್ದಾರ್ ಅವರು ಅಧ್ಯಕ್ಷತೆ ವಹಿಸಿದ್ದರು.ಶ್ರೀಮತಿ ನಾಗರತ್ನ ಇಂಡೆ ಅವರು ಕಾರ್ಯಕ್ರಮ ನಿರೂಪಿಸಿದರು.

## ಸಾಮಾಜಿಕ ಭದ್ರತಾ ವೇತನ ಸ್ಥಗಿತ: ಬಡವರ ಬದುಕಿನ ಮೇಲೆ ಕಾಂಗ್ರೆಸ್ ಸರ್ಕಾರದ ಪ್ರಹಾರ



ಬೀದರ್: ಕಾಂಗ್ರೆಸ್ ಸರ್ಕಾರದ ಅವೈಜ್ಞಾನಿಕ ಹಾಗೂ ಜನವಿರೋಧಿ ನೀತಿಗಳ ಪರಿಣಾಮವಾಗಿ ಬೀದರ್ ಜಿಲ್ಲೆಯ ಸಾವಿರಾರು ಬಡ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿವೆ. ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲರ ವೇತನ ಸೇರಿದಂತೆ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ 82,812 ಫಲಾನುಭವಿಗಳ ವೇತನವನ್ನು ಸ್ಥಗಿತಗೊಳಿಸಿರುವುದು ಅತ್ಯಂತ ಖಂಡನೀಯ ಎಂದು ಬೀದರ್ ದಕ್ಷಿಣ ಕ್ಷೇತ್ರದ ಶಾಸಕ ಹಾಗೂ ಬಿಜೆಪಿ ರಾಜ್ಯ ಕಾರ್ಯದರ್ಶಿ ಡಾ. ಶೈಲೇಂದ್ರ ಬೆಲ್ದಾಳೆ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ಜಿಲ್ಲಾ ಆಡಳಿತದ ಅಧಿಕೃತ ಅಂಕಿಅಂಶಗಳ ಪ್ರಕಾರ, ಜಿಲ್ಲೆಯಲ್ಲಿ 1,18,081 ಅನುಮಾನಾಸ್ಪದ ಪ್ರಕರಣಗಳು ಗುರುತಿಸಲಾಗಿದ್ದು, ಅವುಗಳಲ್ಲಿ 95,863 ಪ್ರಕರಣಗಳ ಪರಿಶೀಲನೆ ಪೂರ್ಣಗೊಂಡಿದೆ. ಈ ಪೈಕಿ 14,002 ಪ್ರಕರಣಗಳನ್ನು ಮುಂದುವರಿಸಲಾಗಿದ್ದು, 82,812 ಪ್ರಕರಣಗಳ ವೇತನ ಸ್ಥಗಿತಗೊಳಿಸಲಾಗಿದೆ. ಇನ್ನೂ 21,267 ಪ್ರಕರಣಗಳ ಪರಿಶೀಲನೆ ಬಾಕಿ ಇದ್ದರೂ, ಸೂಕ್ತ ಪರಿಶೀಲನೆ ಪೂರ್ಣಗೊಳ್ಳುವ ಮೊದಲೇ ಸಾವಿರಾರು ಫಲಾನುಭವಿಗಳ ವೇತನ ಸ್ಥಗಿತಗೊಳಿಸಿರುವುದು ಸರ್ಕಾರದ ಆಡಳಿತ ವೈಫಲ್ಯಕ್ಕೆ ಸಾಕ್ಷಿಯಾಗಿದೆ ಎಂದು ಅವರು ಹೇಳಿದರು.

ಸರ್ಕಾರ ಜಾರಿಗೆ ತಂದಿರುವ ವಾರ್ಷಿಕ ?32 ಸಾವಿರ ಆದಾಯ ಪ್ರಮಾಣಪತ್ರ ಕಡ್ಡಾಯ ನಿಯಮವೇ ಈ ಸಮಸ್ಯೆಗೆ ಮೂಲ ಕಾರಣವಾಗಿದೆ. ಗ್ರಾಮೀಣ ಭಾಗದ ಬಡವರು, ಹಿರಿಯ ನಾಗರಿಕರು, ವಿಧವೆಯರು ಹಾಗೂ ಅಂಗವಿಕಲರು ಆದಾಯ ಪ್ರಮಾಣಪತ್ರ ಪಡೆಯಲು ತಹಶೀಲ್ದಾರ್ ಕಚೇರಿ ಹಾಗೂ ನಾಡಕಚೇರಿಗಳಿಗೆ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ವಯಸ್ಸಾದವರು, ಅಂಗವಿಕಲರು ಹಾಗೂ ಅನಾರೋಗ್ಯದಿಂದ ಬಳಲುತ್ತಿರುವವರಿಗೆ ಈ ಪ್ರಕ್ರಿಯೆ ಮತ್ತಷ್ಟು ಸಂಕಷ್ಟ ಉಂಟುಮಾಡಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಈ ಹಿಂದೆ ಬಿಪಿಎಲ್ ಪಡಿತರ ಚೀಟಿ ಹೊಂದಿದ್ದವರನ್ನು ಅರ್ಹರೆಂದು ಪರಿಗಣಿಸಿ ಸಾಮಾಜಿಕ ಭದ್ರತಾ ವೇತನ ನೀಡಲಾಗುತ್ತಿತ್ತು. ಹಲವು ವರ್ಷಗಳಿಂದ ಯಾವುದೇ ಗೊಂದಲವಿಲ್ಲದೆ ಜಾರಿಯಲ್ಲಿದ್ದ ಈ ವ್ಯವಸ್ಥೆಯನ್ನು ಬದಲಿಸಿ, ಏಕಾಏಕಿ ಆದಾಯ ಪ್ರಮಾಣಪತ್ರ ಕಡ್ಡಾಯಗೊಳಿಸಿರುವುದು ಬಡವರ ಜೀವನೋಪಾಯಕ್ಕೆ ಪೆಟ್ಟು ನೀಡಿದಂತಾಗಿದೆ. ಸಾಮಾಜಿಕ ಭದ್ರತೆ ನೀಡಬೇಕಾದ ಸರ್ಕಾರವೇ ಬಡವರ ಜೀವನದ ಆಧಾರವಾಗಿರುವ ವೇತನವನ್ನು ಸ್ಥಗಿತಗೊಳಿಸಿರುವುದು ಅತ್ಯಂತ ಅಮಾನವೀಯ ಕ್ರಮ ಎಂದು ಟೀಕಿಸಿದರು.

ಇಂದು ಅನೇಕ ವೃದ್ಧರು ತಮ್ಮ ಔಷಧೋಪಚಾರಕ್ಕೂ ಹಣವಿಲ್ಲದೆ ಪರದಾಡುತ್ತಿದ್ದಾರೆ. ವಿಧವೆಯರು ಕುಟುಂಬ ನಿರ್ವಹಣೆಗೆ ತೊಂದರೆ ಅನುಭವಿಸುತ್ತಿದ್ದಾರೆ. ಅಂಗವಿಕಲರು ದೈನಂದಿನ ಜೀವನ ನಿರ್ವಹಿಸಲು ಸಂಕಷ್ಟ ಎದುರಿಸುತ್ತಿದ್ದಾರೆ. ತಿಂಗಳ ವೇತನವನ್ನೇ ನಂಬಿ ಬದುಕುತ್ತಿರುವ ಸಾವಿರಾರು ಬಡ ಕುಟುಂಬಗಳ ಜೀವನದೊಂದಿಗೆ ಸರ್ಕಾರ ಚೆಲ್ಲಾಟವಾಡುತ್ತಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು

# ಅಥಣಿ: ಮತ್ತಷ್ಟು 4 ಎಐ ಕ್ಯಾಮೆರಾಗಳ ಕಾರ್ಯಾರಂಭ

■ ಉದಯರಶ್ಮಿ ದಿನಪತ್ರಿಕೆ



ಅಥಣಿ: ರಸ್ತೆ ಸುರಕ್ಷತೆ ಹಾಗೂ ಸಂಚಾರ ನಿಯಮಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಅಥಣಿ ತಾಲೂಕಿನಲ್ಲಿ ಮತ್ತಷ್ಟು ನಾಲ್ಕು ಎಐ (ಂಖ) ಆದಾರಿತ ಸಂಚಾರ ಕ್ಯಾಮೆರಾಗಳು ಕಾರ್ಯಾರಂಭಿಸಿವೆ ಎಂದು ಅಥಣಿ ಪೊಲೀಸ್ ಇಲಾಖೆ ತಿಳಿಸಿದೆ.

ಈಗಾಗಲೇ ತಾಲೂಕಿನಲ್ಲಿ ಎರಡು ಎಐ ಕ್ಯಾಮೆರಾಗಳು ಕಾರ್ಯನಿರ್ವಹಿಸುತ್ತಿದ್ದು, ಇದೀಗ ಸಂಗೊಳ್ಳಿ ರಾಯಣ್ಣ ವೃತ್ತ, ಶಿವಯೋಗಿ ಸರ್ಕಲ್ (ಹಲ್ಯಾಳ ಸರ್ಕಲ್), ಜತ್ತ ರಸ್ತೆ ಚಮಕೇರಿ ಮಡ್ಡಿ ಕ್ರಾಸ್ ಹಾಗೂ ಮುರುಗುಂಡಿ ಪ್ರದೇಶಗಳಲ್ಲಿ ಹೊಸದಾಗಿ ನಾಲ್ಕು ಎಐ ಕ್ಯಾಮೆರಾಗಳನ್ನು ಅಳವಡಿಸಿ ಕಾರ್ಯಾಚರಣೆಗೆ ಚಾಲನೆ ನೀಡಲಾಗಿದೆ.

ಈ ಮೂಲಕ ಅಥಣಿ ತಾಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಎಐ ಕ್ಯಾಮೆರಾಗಳ ಸಂಖ್ಯೆ ಆರಕ್ಕೆ ಏರಿಕೆಯಾಗಿದೆ. ಸಂಚಾರ ನಿಯಮ ಉಲ್ಲಂಘನೆ, ಹೆಲ್ಮೆಟ್ ಧರಿಸದೇ ವಾಹನ ಚಾಲನೆ, ಸೀಟ್ ಬೆಲ್ಟ್ ಬಳಸದಿರುವುದು, ಮೊಬೈಲ್ ಫೋನ್ ಬಳಸಿ ವಾಹನ ಚಲಾಯಿಸುವುದು ಸೇರಿದಂತೆ ವಿವಿಧ ಸಂಚಾರ ನಿಯಮ ಉಲ್ಲಂಘನೆಗಳನ್ನು ಎಐ ಕ್ಯಾಮೆರಾಗಳು ಸ್ವಯಂಚಾಲಿತವಾಗಿ ಪತ್ತೆಹಚ್ಚಲಿವೆ. ನಿಯಮ ಉಲ್ಲಂಘಿಸಿದ ವಾಹನ ಸವಾರರಿಗೆ ದಂಡ ವಿಧಿಸುವ ಪ್ರಕ್ರಿಯೆ ಕೈಗೊಳ್ಳಲಾಗುವುದು ಎಂದು ಪೊಲೀಸ್ ಇಲಾಖೆ ತಿಳಿಸಿದೆ.

ವಾಹನ ಸವಾರರು ಕಡ್ಡಾಯವಾಗಿ ಸಂಚಾರ ನಿಯಮಗಳನ್ನು ಪಾಲಿಸಿ ಸುರಕ್ಷಿತವಾಗಿ ವಾಹನ ಚಲಾಯಿಸುವಂತೆ ಅಥಣಿ ಡಿವೈಎಸ್ಪಿ ಪ್ರಶಾಂತ ಮುನ್ನೊಳಿ ಮನವಿ ತಿಳಿಸಿದ್ದಾರೆ.



# ಜು.27ರಂದು ಬಿ.ಎಲ್.ಡಿ.ಇರಘುಕುಲ ಸಮನ್ವಯ ಶಾಲೆ ಉದ್ಘಾಟನೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ನಗರದ ಬಿ.ಎಂ.ಪಾಟೀಲ ರಸ್ತೆ, ಪ್ರಕೃತಿ ಕಾಲೋನಿಯಲ್ಲಿ ವಿಶೇಷ ಚೇತನ ಮಕ್ಕಳಿಗಾಗಿ ಸ್ಥಾಪಿಸಲಾದ ಬಿ.ಎಲ್.ಡಿ.ಇರಘುಕುಲ ಸಮನ್ವಯ ಶಾಲೆಯನ್ನು ಜುಲೈ 27 ಸೋಮವಾರ ರಂದು ಬೆ.9ಗಂ. ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ ಉದ್ಘಾಟಿಸಲಿದ್ದಾರೆ ಎಂದು ವಿಧಾನಪರಿಷತ್ ಸದಸ್ಯ, ಬಿ.ಎಲ್.ಡಿ.ಇ ಪ್ರಧಾನಕಾರ್ಯದರ್ಶಿ ಸುನೀಲಗೌಡ ಪಾಟೀಲ ತಿಳಿಸಿದ್ದಾರೆ.

ಈ ಕುರಿತು ಮಾಧ್ಯಮ ಪ್ರಕಟಣೆ ನೀಡಿದ ಅವರು, ವಿಶೇಷ ಚೇತನ ಮಕ್ಕಳು ಇತರ ಮಕ್ಕಳಂತೆ ಶಿಕ್ಷಣ ಪಡೆಯಬೇಕು ಎಂಬ ಉದ್ದೇಶದಿಂದ ಈ ಶಾಲೆಯನ್ನು ಸ್ಥಾಪಿಸಲಾಗಿದೆ. ಇಲ್ಲಿ ದೈಹಿಕ, ಬೌದ್ಧಿಕ, ಶ್ರವಣ, ದೃಷ್ಟಿ ಹಾಗೂ ಕಲಿಕಾ ನ್ಯೂನ್ಯತೆಗಳನ್ನು ಹೊಂದಿರುವ ಮಕ್ಕಳ ಅಗತ್ಯಕ್ಕೆ ಅನುಗುಣವಾಗಿ ಶಿಕ್ಷಣ, ತರಬೇತಿ ಹಾಗೂ ಚಿಕಿತ್ಸೆ ನೀಡಲಾಗುವುದು. ಈ ಶಾಲೆಯಲ್ಲಿ ವಿಶೇಷ ತರಬೇತಿ ಪಡೆದ ಶಿಕ್ಷಕರು, ಫಿಸಿಯೋಥೆರಪಿ, ಶ್ರವಣ, ಮನೋವೈಜ್ಞಾನಿಕ ಸಮಾಲೋಚನೆ ಸೇರಿದಂತೆ ವಿಶೇಷ ತಜ್ಞರು ಈ ಮಕ್ಕಳ ಸಮಗ್ರ ಬೆಳವಣಿಗೆಗೆ ಅಗತ್ಯವಿರುವ ಚಿಕಿತ್ಸೆಗಳನ್ನು ನೀಡಲಿದ್ದಾರೆ. ಅಲ್ಲದೇ, ಮಕ್ಕಳಲ್ಲಿ ಆತ್ಮವಿಶ್ವಾಸ ಬೆಳೆಸಿ, ಅವರನ್ನು ಸಾಧ್ಯವಾದ ಮಟ್ಟಿಗೆ ಇತರ ಮಕ್ಕಳೊಂದಿಗೆ ಬೆರೆಯುವ ಮೂಲಕ ಸಮಾಜದ ಮುಖ್ಯವಾಹಿನಿಗೆ ತರುವುದಾಗಿದೆ ಎಂದು ತಿಳಿಸಿದ್ದಾರೆ.

ಈ ಕಾರ್ಯಕ್ರಮದಲ್ಲಿ ಸಂಭವ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಸ್ಥೆ ನಿರ್ದೇಶಕ ರಾಜೇಂದ್ರ ರುಣವಾಲ, ಬಿ.ಎಲ್.ಡಿ.ಇ ಸಂಸ್ಥೆ ಮತ್ತು ಸಂಭವ ಸಂಸ್ಥೆ ನಿರ್ದೇಶಕರು, ಅಧಿಕಾರಿಗಳು ಹಾಗೂ ಗಣ್ಯರು ಉಪಸ್ಥಿತರಿರಲಿದ್ದಾರೆ ಎಂದು ಸುನೀಲಗೌಡ ಪಾಟೀಲ ತಿಳಿಸಿದ್ದಾರೆ.

# ಸಚಿವ ಎಂ ಬಿ ಪಾಟೀಲ ಜಿಲ್ಲಾ ಪ್ರವಾಸ ಇಂದು

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಬೃಹತ್ ಮತ್ತು ಮಾಧ್ಯಮ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ ಬಿ ಪಾಟೀಲ ಅವರು ನಾಳೆ ದಿ.26 ರವಿವಾರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ.ಅಂದು ಬೆ. 10–12 ಗಂ. ವರೆಗೆ ಬಿ ಎಂ ಪಾಟೀಲ ರಸ್ತೆಯ ಗೃಹ ಕಚೇರಿಯಲ್ಲಿ ಸಾರ್ವಜನಿಕರ ಕುಂದು ಕೊರತೆ ಆಲಿಸಲಿದ್ದಾರೆ. ಸಂ. 4 ಗಂ. ಬಬಲೇಶ್ವರ ತಾಲೂಕಿನ ಮಮದಾಪುರ ಗ್ರಾಮಕ್ಕೆ ಭೇಟಿ ನೀಡಲಿದ್ದಾರೆ ಎಂದು ಸಚಿವರ ಕಚೇರಿ ಪ್ರಕಟಣೆಯಲ್ಲಿ ತಿಳಿಸಿದೆ.

# ಮತದಾರರ ಪಟ್ಟಿ ಪರಿಷ್ಕರಣೆ: 15.24 ಲಕ್ಷ ಗಣತಿ ಫಾರಂ ಡಿಜಿಟಲೀಕರಣ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಜಿಲ್ಲೆಯಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಹಾಗೂ ಮನೆ ಮನೆ ಗಣತಿ ಕಾರ್ಯವು ಭರದಿಂದ ಸಾಗಿದ್ದು, ಇದುವರೆಗೆ ಒಟ್ಟು 15,24,098 ಗಣತಿ ಫಾರಂಗಳನ್ನು ಡಿಜಿಟಲೀಕರಣಗೊಳಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಗಳಾದ ಜಿಲ್ಲಾಧಿಕಾರಿಗಳಾದ ಡಾ.ಆನಂದ.ಕೆ ಅವರು ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಜೂನ್ 16 ರಲ್ಲಿದ್ದಂತೆ ಒಟ್ಟು 19,82,114 ಮತದಾರರಿದ್ದು, ಮನೆ ಮನೆ ಗಣತಿಗಾಗಿ ಬಿ.ಎಲ್.ಒ ಗಣತಿ ಫಾರಂಗಳನ್ನು ವಿತರಿಸಲಾಗಿತ್ತು. ಈ ಗಣತಿ ಹಾಗೂ ಡಿಜಿಟಲೀಕರಣ ಪ್ರಕ್ರಿಯೆಯು ಜೂನ್ 30 ರಿಂದ ಪ್ರಾರಂಭವಾಗಿದ್ದು, ಆಗಸ್ಟ್ 8 ರವರೆಗೆ ನಡೆಯಲಿದೆ ಎಂದವರು ಮಾಹಿತಿ ನೀಡಿದ್ದಾರೆ. ಇದುವರೆಗೆ ನಡೆದಿರುವ ಪ್ರಕ್ರಿಯೆಯಲ್ಲಿ ಮತದಾರರು ಆನ್‌ಲೈನ್ ಮೂಲಕವೇ ನೇರವಾಗಿ 3,907 ಗಣತಿ ಫಾರಂಗಳನ್ನು ಸಲ್ಲಿಸಿದ್ದಾರೆ. ಗಣತಿ ಪರಿಶೀಲನೆ ವೇಳೆ ಜಿಲ್ಲೆಯಾದ್ಯಂತ 39,843 ಮರಣ ಹೊಂದಿದ ಮತದಾರರು, 72,688 ಖಾಯಂ ಆಗಿ ಸ್ಥಳಾಂತರಗೊಂಡವರು, 21,794 ಸಂಗ್ರಹಿಸಲಾಗದ / ಗೈರುಹಾಜರಾದವರು ಹಾಗೂ 16,863 ಈಗಾಗಲೇ ನೋಂದಾಯಿಸಿರುವ ಪ್ರಕರಣಗಳು ಸೇರಿವೆ ಎಂದು ಅವರು ಹೇಳಿದ್ದಾರೆ.

ಸಾರ್ವಜನಿಕರು ಹಾಗೂ ಮತದಾರರು ಈ ಕುರಿತ ಹೆಚ್ಚಿನ ವಿವರಗಳನ್ನು ಜಿಲ್ಲಾಡಳಿತದ ಅಧಿಕೃತ ವೆಬ್‌ಸೈಟ್ (https://vijayapura.nic.in/en/) ಮೂಲಕ ಪಡೆದುಕೊಳ್ಳಬಹುದು ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಿಂದಗಿಯಲ್ಲಿ ಜು.27 ರಂದು ಪತ್ರಿಕಾ ದಿನಾಚರಣೆ

■ ಉದಯರಶ್ಮಿ ದಿನಪತ್ರಿಕೆ

ಸಿಂದಗಿ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ತಾಲೂಕು ಘಟಕ, ಸಿಂದಗಿ ವತಿಯಿಂದ ಜು.27 ಸೋಮವಾರ ಬೆಳಿಗ್ಗೆ 10ಗಂಟೆಗೆ ಶ್ರೀ ಪದ್ಮರಾಜ ಶಿಕ್ಷಣ ಮಹಾವಿದ್ಯಾಲಯದಲ್ಲಿ ನೂತನ ಪದಾಧಿಕಾರಿಗಳ ಪದಗ್ರಹಣ ಹಾಗೂ ಪತ್ರಿಕಾ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದ ಸಾನ್ನಿಧ್ಯವನ್ನು ಯಂಕಂಚಿ ಕುಂಟೋಜಿ ಹಿರೇಮಠದ ಶ್ರೀ ಅಭಿನವ ರುದ್ರಮುನಿ ಶಿವಾಚಾರ್ಯರು ವಹಿಸಲಿದ್ದಾರೆ. ಸಮ್ಮುಖವನ್ನು ರಾಂಪೂರ ಪಿ.ಎ.ಗ್ರಾಮದ ಶ್ರೀ ಸಂಗನಬಸವೇಶ್ವರ ಆರೂಢ ಮಠದ ಶ್ರೀ ನಿತ್ಯಾನಂದ ಮಹಾರಾಜರು ವಹಿಸುವರು. ಕಾರ್ಯಕ್ರಮವನ್ನು ಶಾಸಕ ಅಶೋಕ ಮನಗೂಳಿ ಉದ್ಘಾಟಿಸಲಿದ್ದಾರೆ. ಮಾಜಿ ಶಾಸಕ ರಮೇಶ ಭೂಸನೂರ ಅವರು ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ತಾಲೂಕು ದಂಡಾಧಿಕಾರಿ ಕರೆಪ್ಪ ಬೆಳ್ಳಿ ಮತ್ತು ಹಿರಿಯ ವರದಿಗಾರರಾದ ಶಾಂತು ಹಿರೇಮಠ ಪಾಲ್ಗೊಳ್ಳಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ತಾಲೂಕಾಧ್ಯಕ್ಷ ಮಹಾಂತೇಶ ನೂಲಾನವರ ವಹಿಸಿಕೊಳ್ಳುವರು. ವಿಶೇಷ ಆಹ್ವಾನಿತರಾಗಿ ಕಾನಿಪ ಜಿಲ್ಲಾಧ್ಯಕ್ಷ ಅಶೋಕ ಯಡಳ್ಳಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಇಂದುಶೇಖರ ಮಣೂರ, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಪ್ರಕಾಶ ಬೆಣ್ಣೂರ, ಹಿರಿಯ ಪತ್ರಿಕೋದ್ಯಮಿ ಟಿ.ಕೆ.ಮಲಗೊಂಡ, ನಿಕಟಪೂರ್ವ ಅಧ್ಯಕ್ಷ ಆನಂದ ಶಾಬಾದಿ ಭಾಗವಹಿಸಲಿದ್ದಾರೆ. ಅತಿಥಿಗಳಾಗಿ ತಾಪಂ ಇಒ ರಾಮು ಅಗ್ನಿ, ಬಿಇಒ ಟಿ.ಎಸ್.ಆಲಗೂರ, ತಾಲೂಕು ವೈದ್ಯಾಧಿಕಾರಿ ಡಾ.ಎ.ಎ.ಮಾಗಿ, ಸಿಪಿಐ ಸುನೀಲ ಮೂಲಿಮನಿ ಭಾಗಿಯಾಗಲಿದ್ದಾರೆ. ಕಾರ್ಯಕ್ರಮದ ಉಪಸ್ಥಿತಿಯನ್ನು ಕಾಲೇಜಿನ ಪ್ರಾಚಾರ್ಯ ಡಾ.ಜೆ.ಸಿ.ನಂದಿಕೋಲ ವಹಿಸಿಕೊಳ್ಳುವರು ಎಂದು ಜಿಲ್ಲಾ ಕಾರ್ಯಕಾರಿ ಸಮಿತಿ ನಾಮ ನಿರ್ದೇಶಿತ ಸದಸ್ಯ ಮಲ್ಲಿಕಾರ್ಜುನ ಅಲ್ಲಾಪೂರ, ತಾಲೂಕಾಧ್ಯಕ್ಷ ಮಹಾಂತೇಶ ನೂಲಾನವರ, ಪ್ರ. ಕಾರ್ಯದರ್ಶಿ ಇಸ್ಮಾಯಿಲ್ ಶೇಖ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ತಾಲೂಕಿನ ಕಾನಿಪ ಸಂಘದ ಸರ್ವ ಸದಸ್ಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಈ ಮೂಲಕ ಮನವಿ ಮಾಡಿಕೊಳ್ಳಲಾಗಿದೆ.

## ವಿಜಯಪುರ ಜಿಲ್ಲಾ ಕೃಷಿಕ ಸಮಾಜದ ಪದಾಧಿಕಾರಿಗಳಿಂದ ಜಿಲ್ಲಾಧಿಕಾರಿಗಳಿಗೆ ಮನವಿ

# ವಿಜಯಪುರ ಜಿಲ್ಲೆಯನ್ನು ಬರ ಪೀಡಿತವೆಂದು ಘೋಷಿಸಲು ಆಗ್ರಹ

■ ಉದಯರಶ್ಮಿ ದಿನಪತ್ರಿಕೆ




ವಿಜಯಪುರ: ಜಿಲ್ಲೆಯ ಎಲ್ಲ ತಾಲೂಕುಗಳನ್ನು ಬರ ಪೀಡಿತ ತಾಲೂಕುಗಳು ಎಂದು ಘೋಷಿಸಲು ಆಗ್ರಹಿಸಿ ವಿಜಯಪುರ ಜಿಲ್ಲಾ ಕೃಷಿಕ ಸಮಾಜದ ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲಿಸಲಾಯಿತು.

ಇವತ್ತಿನ ಜಿಲ್ಲಾ ಸಭೆಯಲ್ಲಿ ಚರ್ಚಿಸುತ್ತಾ ಜಿಲ್ಲೆಯ ರೈತರು ತೊಗರಿ, ಗೊಂಜಾಳ ಹಾಗೂ ಇತರೆ ಮುಂಗಾರಿನ ಬೆಳೆಗಳು ಮಳೆಯ ಕೊರತೆಯಿಂದ ಸಂಪೂರ್ಣ ಹಾಳಾಗಿದ್ದು ಅಧಿಕಾರಿಗಳು ಎಲ್ಲ ತಾಲೂಕಗಳಿಗೆ ಭೇಟಿ ನೀಡಿ ಪರಿಶೀಲಿಸಿ ಸರ್ಕಾರಕ್ಕೆ ವರದಿ ಸಲಿಸಬೇಕು ಹಾಗೂ ಬರ ಪೀಡಿತ ತಾಲೂಕುಗಳು ಎಂದು ಗೋಷಣೆಮಾಡಿ ಶೀಘ್ರ ಬರ ಪರಿಹಾರ ನೀಡಬೇಕು ಎಂದು ಸರ್ಕಾರಕ್ಕೆ ವಿನಂತಿಪೂರ್ವಕವಾಗಿ ಆಗ್ರಹಿಸಲಾಯಿತು .

ಭೀಮಾ ನದಿ ತೀರದಲ್ಲಿ ನೀರಿನ ಸಮಸ್ಯೆ ಆಗಿದ್ದು ಕೂಡಲೇ ಜನ ಹಾಗೂ ಜಾನವಾರಗಳಿಗೆ ಕುಡಿಯುವ ನೀರಿನ ಕೊರತೆ ನೀಗಿಸಲು ಮಹಾರಾಷ್ಟ್ರ ಸರ್ಕಾರದ ಜೊತೆ ಚರ್ಚಿಸಿ ನದಿಗೆ ನೀರು ಹರಿಸಬೇಕೆಂದು ಆಗ್ರಹಿಸಲಾಯಿತು . ಸಭೆಯಲ್ಲಿ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ ಶಿವನಗೌಡ ಬಿರಾದಾರ ಸೋಮನಾಳ, ಸಂಜಯ ಪಾಟೀಲ ಕನಮಡಿ , ಶಿವಪ್ಪಗೌಡ ಬಿರಾದಾರ , ದಾನಮ್ಮಗೌಡ್ತಿ ಪಾಟೀಲ , ಪೀರಗೊಂಡ ಗಧ್ಯಾಳ , ಮಹಾವೀರ ಕುಸನಾಳ , ರಾಮನಗೌಡ ಪಾಟೀಲ , ಖ ಒ ಆನಂದಿ , ಶಂಕರಗೌಡ ಪಾಟೀಲ , ಃ ಖ ಮಾಡಗಿ , ಶ್ರೀಶೈಲಗೌಡ ಪಾಟೀಲ , ಸಂಗನಗೌಡ ಪಾಟೀಲ ಮುಳವಾಡ , ಒ ಖ ಕಾಶಿನಕುಂಟೆ , ನಿಂಗನಗೌಡ ಪಾಟೀಲ , ಶಂಕರ ರೇವಡಿ , ಅಯನಗೌಡ ಪಾಟೀಲ , ಒ ಔ ಹಿರೇಕುರಬರ , ಒ ಖ ಕೊಕರೆ , ಉ ಖ ನೆಲ್ಲಗಿ , ವೆಂಕನಗೌಡ ಪಾಟೀಲ , ರಮೇಶ ಪೂಜಾರಿ, ಎ ಖ ಪಾಲ್ಕೆ , ಸಂಗಮೇಶ ಅಂಗಡಿ ಹಾಗೂ ಜಿಲ್ಲೆಯ ಪ್ರಗತಿಪರ ರೈತರು ಉಪಸ್ಥಿತರಿದ್ದರು.

## ಮಾದಕ ವ್ಯಸನ ಮುಕ್ತ ಯುವ ಸಮುದಾಯ ಜಾಗೃತಿ ಕಾರ್ಯಕ್ರಮದಲ್ಲಿ ಶಾಸಕ ಲಕ್ಷ್ಮಣ ಸವದಿ ಸಲಹೆ

# ವಿದ್ಯಾರ್ಥಿಗಳು ಯಾವುದೇ ವ್ಯಸನಗಳಿಗೆ ಒಳಗಾಗಬಾರದು

■ ಉದಯರಶ್ಮಿ ದಿನಪತ್ರಿಕೆ




ಅಥಣಿ: ಇಂದಿನ ಯುವ ಪೀಳಿಗೆಯು ಮಾದಕ ವಸ್ತುಗಳ ದುಶ್ಚಟಕ್ಕೆ ಬಲಿಯಾಗುತ್ತಿರುವುದು ರಾಷ್ಟ್ರದ ಭವಿಷ್ಯಕ್ಕೆ ದೊಡ್ಡ ಸವಾಲಾಗಿದೆ ಆದ್ದರಿಂದ ವಿದ್ಯಾರ್ಥಿಗಳು ಯಾವುದೇ ವ್ಯಸನಗಳಿಗೆ ಒಳಗಾಗದೆ, ಶಿಕ್ಷಣದ ಮೂಲಕ ದೇಶದ ಸದೃಢ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದು ಅಥಣಿ ಶಾಸಕ ಲಕ್ಷ್ಮಣ ಸವದಿ ಕರೆ ನೀಡಿದರು.

ಅವರು ಅಂತರರಾಷ್ಟ್ರೀಯ ಮಾದಕ ವ್ಯಸನ ಮತ್ತು ಕಳ್ಳಸಾಗಾಣಿಕೆ ವಿರೋಧಿ ದಿನದ ಅಂಗವಾಗಿ ಶನಿವಾರ ಜೆ.ಎ. ಪದವಿ ಪೂರ್ವ ಕಾಲೇಜು ಆವರಣದಲ್ಲಿ ಅಥಣಿ ಪೊಲೀಸ್ ಠಾಣೆ ವತಿಯಿಂದ ಮಾದಕ ವ್ಯಸನ ಮುಕ್ತ ಯುವ ಸಮುದಾಯ ಜಾಗೃತಿ ಕಾರ್ಯಕ್ರಮ ಸಸಿಗೆ ನೀರುಣಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪೋಷಕರು ತಮ್ಮ ಮಕ್ಕಳ ಬಗ್ಗೆ ಅಪಾರ ಕನಸು ಕಂಡಿರುತ್ತಾರೆ. ಆ ನಂಬಿಕೆಯನ್ನು ಉಳಿಸಿಕೊಳ್ಳುವ ಜವಾಬ್ದಾರಿ ವಿದ್ಯಾರ್ಥಿಗಳ ಮೇಲಿದೆ ಎಂದು ಹೇಳಿದರು.

ಪೊಲೀಸ್ ಇಲಾಖೆಯು ಶಾಲಾ ಕಾಲೇಜುಗಳಲ್ಲಿ ಈ ರೀತಿ ಜಾಗೃತಿ ಮೂಡಿಸುತ್ತಿರುವುದು ಸ್ವಾಗತಾರ್ಹ. ವ್ಯಸನಮುಕ್ತ ಸಮಾಜ ನಿರ್ಮಾಣವಾದಾಗ ಮಾತ್ರ ಬಲಿಷ್ಠ ರಾಷ್ಟ್ರ ಕಟ್ಟಲು ಸಾಧ್ಯ ಎಂದು ಅವರು ಅಭಿಪ್ರಾಯಪಟ್ಟರು.

ಅಥಣಿ ಡಿವೈಎಸ್ಪಿ ಪ್ರಶಾಂತ್ ಮುನ್ನೊಳಿ ಮಾತನಾಡಿ ಇತ್ತೀಚೆಗೆ ಯುವಕರು ಅಪರಿಚಿತರ ಆಕರ್ಷಣೆ ಮತ್ತು ಕೆಟ್ಟ ಸಂಗಡದಿಂದ ಮಾದಕ ಜಾಲಕ್ಕೆ ಸಿಲುಕಿ ತಮ್ಮ ಭವಿಷ್ಯ ಹಾಳು ಮಾಡಿಕೊಳ್ಳುತ್ತಿದ್ದಾರೆ

ಇದನ್ನು ತಡೆಯಲು ಪೊಲೀಸ್ ಇಲಾಖೆ "ಬೇಡ ಬ್ರೋ" ಎಂಬ ಸ್ಲೋಗನ್ ಮೂಲಕ ಅಭಿಯಾನ ಆರಂಭಿಸಿದೆ. ಯಾರಾದರೂ ನಿಮಗೆ ವ್ಯಸನಕ್ಕೆ ಆಹ್ವಾನ ನೀಡಿದರೆ ಒಂದೇ ಮಾತಿನಲ್ಲಿ 'ಬೇಡ ಬ್ರೋ' ಎಂದು ನಿರಾಕರಿಸಿ. ಮಾದಕ ದ್ರವ್ಯ ಮಾರಾಟ, ಸಾಗಣೆ ಅಥವಾ ಸೇವನೆ ಕಂಡುಬಂದಲ್ಲಿ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ನಿರ್ಭಯವಾಗಿ ಮಾಹಿತಿ ನೀಡಬೇಕು. ಮಾಹಿತಿ ನೀಡಿದವರ ಹೆಸರನ್ನು ಗೌಪ್ಯವಾಗಿಡಲಾಗುವುದು. ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದರು

ಈ ಸಂದರ್ಭದಲ್ಲಿ ಡಾ. ರಾಮ ಕುಲಕರ್ಣಿ, ಸಂದೀಪ ಸಂಗ್ರಾಮ, ಸಿಪಿಐ ಸಂತೋಷ ಹಳ್ಳೂರ, ಪಿಎಸ್‌ಗಳಾದ ಗಿರಮಲಪ್ಪ ಉಪ್ಪಾರ, ಮಲ್ಲಿಕಾರ್ಜುನ ತಳವಾರ, ರಾಜು ಗುಡೋಡಗಿ, ಮುರುಗೇಶ್ ಅವಟಿ, ಎಸ್.ವಿ. ದಾಸರೆಡ್ಡಿ, ಎಂ.ಪಿ. ಮೇತ್ರಿ ಸೇರಿದಂತೆ ಕಾಲೇಜಿನ ಪ್ರಾಧ್ಯಾಪಕರು, ನೂರಾರು ವಿದ್ಯಾರ್ಥಿಗಳು ಮತ್ತು ಪೊಲೀಸ್ ಸಿಬ್ಬಂದಿ ಭಾಗವಹಿಸಿದ್ದರು.

ಕಾರ್ಯಕ್ರಮದ ಕೊನೆಯಲ್ಲಿ ಪಿಎಸ್ ಗಿರಿಮಲ್ಲಪ್ಪ ಅವರು ವಿದ್ಯಾರ್ಥಿಗಳಿಗೆ ಮಾದಕ ವ್ಯಸನ ವಿರೋಧಿ ಪ್ರತಿಜ್ಞಾ ವಿಧಿ ಬೋಧಿಸಿದರು.

## ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಆಡಳಿತ ವೈಫಲ್ಯ ಔರಾದ ಸಾರ್ವಜನಿಕರ ಆಕ್ರೋಶ


ಔರಾದ್ :ಪಟ್ಟಣ ಪಂಚಾಯಿತಿಯ ಮುಖ್ಯಾಧಿಕಾರಿಯ ಆಡಳಿತ ವೈಫಲ್ಯದಿಂದ ಪಟ್ಟಣದ ನಾಗರಿಕರು ಮೂಲಭೂತ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದು, ಸಾರ್ವಜನಿಕರಲ್ಲಿ ತೀವ್ರ ಅಸಮಾಧಾನ ವ್ಯಕ್ತವಾಗುತ್ತಿದೆ. ಪಟ್ಟಣದಲ್ಲಿ ಕುಡಿಯುವ ನೀರಿನ ಸಮರ್ಪಕ ಪೂರೈಕೆ, ಸ್ವಚ್ಛತಾ ಕಾರ್ಯ, ರಸ್ತೆ ದುರಸ್ತಿ, ಚರಂಡಿಗಳ ಸ್ವಚ್ಛತೆ, ಬೀದಿ ದೀಪಗಳ ನಿರ್ವಹಣೆ ಸೇರಿದಂತೆ ಹಲವು ಅಗತ್ಯ ಸೇವೆಗಳು ಸಮರ್ಪಕವಾಗಿ ನಡೆಯುತ್ತಿಲ್ಲ ವೀರಶೈವ ಲಿಂಗಾಯತ ಸಂಘಟನಾ ವೇದಿಕೆ ಅಧ್ಯಕ್ಷ ಆನಂದ ಪಿ.ದ್ಯಾಡೆ ಅವರು ಆರೋಪಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು ಅನೇಕ ಬಾರಿ ಮನವಿ ಸಲ್ಲಿಸಿದರೂ ಅಧಿಕಾರಿಗಳು ಸಮಸ್ಯೆಗಳ ಪರಿಹಾರಕ್ಕೆ ಮುಂದಾಗುತ್ತಿಲ್ಲ ಎಂಬ ದೂರುಗಳು ಕೇಳಿಬರುತ್ತಿವೆ. ಮಳೆಗಾಲದಲ್ಲಿ ಚರಂಡಿಗಳು ಸ್ವಚ್ಛಗೊಳಿಸದ ಕಾರಣ ಮಳೆ ನೀರು ರಸ್ತೆಗಳಲ್ಲಿ ನಿಂತು ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿದೆ. ಕೆಲ ಪ್ರದೇಶಗಳಲ್ಲಿ ಕಸದ ರಾಶಿಗಳು ತೆರವುಗೊಳ್ಳದೇ ದುರ್ವಾಸನೆ ಹರಡುತ್ತಿದ್ದು, ಸಾಂಕ್ರಾಮಿಕ ರೋಗಗಳ ಭೀತಿ ಎದುರಾಗಿದೆ. ಹಲವು ಬಡಾವಣೆಗಳಲ್ಲಿ ಬೀದಿ ದೀಪಗಳು ಕಾರ್ಯನಿರ್ವಹಿಸದೇ ರಾತ್ರಿ ವೇಳೆ ಸಾರ್ವಜನಿಕರು ಓಡಾಡಲು ಸಂಕಷ್ಟ ಅನುಭವಿಸುತ್ತಿದ್ದಾರೆ.ಸಾಮಾಜಿಕ ಕಾರ್ಯಕರ್ತರು ಹಾಗೂ ಸಾರ್ವಜನಿಕರು ಪಟ್ಟಣ ಪಂಚಾಯಿತಿಯ ಆಡಳಿತ ಕ್ರಮವನ್ನು ಪ್ರಶ್ನಿಸಿದ್ದು, ಮುಖ್ಯಾಧಿಕಾರಿ ಜನರ ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ವಿಫಲರಾಗಿದ್ದಾರೆ ಎಂದು ಜಿಲ್ಲಾಧಿಕಾರಿ ಕಚೇರಿಯ ಯೋಜನಾ ನಿರ್ದೇಶಕರಾದ ಶಿವರಾಜ ರಾಠೋಡ ಅವರಿಗೆ ದೂರು ನೀಡಿದ್ದರು. ಆಗ ಒಂದು ವಾರದ ಒಳಗೆ ಸಮಸ್ಯೆಗಳಿಗೆ ಪರಿಹಾರ ಒದಗಿಸುವುದಾಗಿ ತಿಳಿಸಿದ ಮುಖ್ಯಾಧಿಕಾರಿಗಳು ಇಲ್ಲಿಯ ವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ, ತಕ್ಷಣವೇ ಸಮಸ್ಯೆಗಳನ್ನು ಬಗೆಹರಿಸಿ ಜನಸ್ನೇಹಿ ಆಡಳಿತ ನಡೆಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಈ ಬಗ್ಗೆ ಜಿಲ್ಲಾಡಳಿತ ಹಾಗೂ ಸಂಬಂಧಿತ ಇಲಾಖೆಯ ಹಿರಿಯ ಅಧಿಕಾರಿಗಳು ಮಧ್ಯಪ್ರವೇಶಿಸಿ ಪಟ್ಟಣ ಪಂಚಾಯಿತಿಯ ಆಡಳಿತ ವೈಫಲ್ಯಗಳ ಕುರಿತು ಪರಿಶೀಲನೆ ನಡೆಸಿ, ನಿರ್ಲಕ್ಷ್ಯ ತೋರಿದ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಪಟ್ಟಣ ಪಂಚಾಯಿತಿ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲಾಗುವುದು ಎಂದು ದ್ಯಾಡೆ ಎಚ್ಚರಿಸಿದ್ದಾರೆ.

# ಇಂಡಿಯಲ್ಲಿ ಸಂಚಲನ: ಎರಡೂವರೆ ತಿಂಗಳ ಬಳಿಕ ಕೊಲೆ ಆರೋಪದ ತಿರುವು

■ ಉದಯರಶ್ಮಿ ದಿನಪತ್ರಿಕೆ





**ಮೃತ: ಅರುಣಕುಮಾರ್ ಬಡಿಗೇರ (28)**
**ಸ್ಥಳ: ಇಂಡಿ, ವಿಜಯಪುರ ಜಿಲ್ಲೆ**
**ಘಟನೆ: ಮೇ 6ರಂದು ಹೃದಯಾಘಾತ ಎಂದು ಹೇಳಿ ಅಂತ್ಯಸಂಸ್ಕಾರ**
**ತಿರುವು: ಮೊಬೈಲ್ ಚಾಟಿಂಗ್ ಹಾಗೂ ಡಿಜಿಟಲ್ ಸಾಕ್ಷ್ಯಗಳಿಂದ ಕೊಲೆ ಆರೋಪ**
**ಆರೋಪ: ಪತ್ನಿ ಭಾಗ್ಯಶ್ರೀ ವಿರುದ್ಧ**
**ದೂರು ದಾಖಲು: ಜುಲೈ 19, ಇಂಡಿ ಪೊಲೀಸ್ ಠಾಣೆ**
**ಪ್ರಸ್ತುತ ಸ್ಥಿತಿ: ಆರೋಪಿಯನ್ನು ವಶಕ್ಕೆ ಪಡೆದು ಪೊಲೀಸ್ ವಿಚಾರಣೆ ಮುಂದುವರಿಕೆ**

ಇಂಡಿ: ನಗರದಲ್ಲಿ ಮೇ 6ರಂದು ಹೃದಯಾಘಾತದಿಂದ ಮೃತಪಟ್ಟಿದ್ದಾರೆ ಎಂದು ನಂಬಲಾಗಿದ್ದ 28 ವರ್ಷದ ಅರುಣಕುಮಾರ್ ಬಡಿಗೇರ ಅವರ ಸಾವಿನ ಪ್ರಕರಣ ಇದೀಗ ಸಂಚಲನಕಾರಿ ತಿರುವು ಪಡೆದುಕೊಂಡಿದೆ. ಆರಂಭದಲ್ಲಿ ಸಹಜ ಸಾವು ಎಂದು ಭಾವಿಸಲಾಗಿದ್ದ ಪ್ರಕರಣದಲ್ಲಿ ಇದೀಗ ಪತ್ನಿಯ ವಿರುದ್ಧವೇ ಕೊಲೆ ಆರೋಪ ಕೇಳಿಬಂದಿದ್ದು, ಪೊಲೀಸರು ತನಿಖೆ ಆರಂಭಿಸಿದ್ದಾರೆ. ಕುಟುಂಬದವರ ಮಾಹಿತಿ ಪ್ರಕಾರ, ಅರುಣಕುಮಾರ್ ಅವರ ಪತ್ನಿ ಭಾಗ್ಯಶ್ರೀ ಅವರು ಪತಿ ಹೃದಯಾಘಾತದಿಂದ ಮೃತಪಟ್ಟಿದ್ದಾರೆ ಎಂದು ತಿಳಿಸಿದ್ದರು. ಯಾವುದೇ ವೈದ್ಯಕೀಯ ಪರೀಕ್ಷೆ ಅಥವಾ ಮರಣೋತ್ತರ ಪರೀಕ್ಷೆ ನಡೆಸದೇ ಕುಟುಂಬಸ್ಥರು ಅಂತ್ಯಸಂಸ್ಕಾರ ನೆರವೇರಿಸಿದ್ದರು.

ಆದರೆ, ಘಟನೆಯಾದ ಸುಮಾರು ಎರಡುವರೆ ತಿಂಗಳ ಬಳಿಕ ಭಾಗ್ಯಶ್ರೀ ಅವರ ನಡೆ–ನುಡಿಗಳ ಬಗ್ಗೆ ಕುಟುಂಬಸ್ಥರಿಗೆ ಅನುಮಾನ ವ್ಯಕ್ತವಾಗಿದ್ದು, ಅವರ ಮೊಬೈಲ್ ಫೋನ್ ಪರಿಶೀಲಿಸಿದ ವೇಳೆ ಕೆಲವು ಚಾಟಿಂಗ್ ಹಾಗೂ ವಿಡಿಯೊ ಕರೆಗಳ ಸ್ಕ್ರೀನ್‌ಶಾಟ್‌ಗಳು ದೊರೆತಿವೆ ಎಂದು ಆರೋಪಿಸಲಾಗಿದೆ. ಈ ಮಾಹಿತಿಯ ಆಧಾರದ ಮೇಲೆ ಅರುಣಕುಮಾರ್ ಅವರ ಸಾವು ಸಹಜವಲ್ಲ ಎಂಬ ಅನುಮಾನ ಮೂಡಿದೆ.

ದೂರಿನಲ್ಲಿ ಉಲ್ಲೇಖಿಸಿರುವಂತೆ, ಭಾಗ್ಯಶ್ರೀ ಅವರಿಗೆ ಕಾಲೇಜು ಸಹಪಾಠಿಯಾಗಿದ್ದ ದೀಪಕ್ ನಾವಾದಿ ಎಂಬಾತನೊಂದಿಗೆ ಸಂಬಂಧವಿದ್ದು, ಪತಿ ಅಡ್ಡಿಯಾಗಿದ್ದ ಕಾರಣ ಮೇ 5ರ ರಾತ್ರಿ ಊಟದಲ್ಲಿ ನಿದ್ರೆ ಮಾತ್ರೆ ನೀಡಿ, ಮೇ 6ರ ಮುಂಜಾನೆ ಗಾಢ ನಿದ್ರೆಯಲ್ಲಿದ್ದ ವೇಳೆ ಉಸಿರುಗಟ್ಟಿಸಿ ಕೊಲೆ ಮಾಡಿರುವ ಆರೋಪ ಕೇಳಿಬಂದಿದೆ.ಈ ಸಂಬಂಧ ಜುಲೈ 19ರಂದು ಮೃತನ ಕುಟುಂಬಸ್ಥರು ಇಂಡಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ದೂರಿನ ಆಧಾರದ ಮೇಲೆ ಪೊಲೀಸರು ಭಾಗ್ಯಶ್ರೀ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದು, ಪ್ರಕರಣದ ವಿವಿಧ ಆಯಾಮಗಳಲ್ಲಿ ತನಿಖೆ ಮುಂದುವರಿದಿದೆ.

# ದೇಶದ ಭವಿಷ್ಯ ವರ್ಗ ಕೋಣೆಗಳಲ್ಲಿ ಅಡಗಿದೆ :ರೇಖಾ

■ ಉದಯರಶ್ಮಿ ದಿನಪತ್ರಿಕೆ

ಸಿಂದಗಿ: ದೇಶದ ಭವಿಷ್ಯವು ವರ್ಗ ಕೋಣೆಯಲ್ಲಿ ಅಡಗಿದೆ. ಶಾಲಾ ಸಂಸತ್ತುಗಳ ರಚನೆಯಿಂದ ನಮ್ಮ ದೇಶದ ಮುಂದಿನ ಭವ್ಯ ನಾಯಕರು ಈ ವೇದಿಕೆಯ ಮುಖಾಂತರ ನಿರ್ಮಾಣವಾಗುತ್ತಾರೆ. ಮತ್ತು ಉತ್ತಮ ನಾಯಕತ್ವ ಗುಣ ಮಕ್ಕಳಲ್ಲಿ ಬರುತ್ತದೆ ಎಂದು ರೇಖಾ ಮೋಹರೆ ಹೇಳಿದರು.

ನಗರದ ನಾಗೂರ ಬಡಾವಣೆಯ ಪ್ರೇರಣಾ ಶಿಶುನಿಕೇತನ, ವಿದ್ಯಾನಿಕೇತನ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ ಹಾಗೂ ಪ್ರೇರಣಾ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಯಲ್ಲಿ ಪಠ್ಯೇತರ ಮತ್ತು ಪಠ್ಯಪೂರಕ ಹಾಗೂ ಶಾಲಾ ಸಂಘಗಳ ಉದ್ಘಾಟನೆ ಶಾಲಾ ಸಂಸತ್ತಿನ ಪ್ರತಿನಿಧಿಗಳ ಪ್ರತಿಜ್ಞಾ ವಿಧಿ ಸ್ವೀಕಾರ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳು ಜ್ಞಾನ ಸಂಪಾದನೆಯೊಂದಿಗೆ ಗುರುವಿನ ಮಹತ್ವವನ್ನು ತಿಳಿದು, ಗುರುವಿನ ಕೃಪೆಯನ್ನು ಅನಂತವಾಗಿ ಪಡೆಯಬೇಕು. ಮತ್ತು ಪುಸ್ತಕ ಜ್ಞಾನದೊಂದಿಗೆ ಪರಂಪರೆ ಮತ್ತು ಸಂಸ್ಕೃತಿಯ ಜ್ಞಾನವನ್ನು ಗಳಿಸಿದಾಗ ಸರ್ವಾಂಗೀಣ ಪ್ರಗತಿ ಮಕ್ಕಳಲ್ಲಿ ಉಂಟಾಗುತ್ತದೆ ಎಂದರು. ಈ ವೇಳೆ ಅಧ್ಯಕ್ಷ ಆರ್.ಡಿ.ಕುಲಕರ್ಣಿ ಪ್ರಾಸ್ತಾವಿಕ ಮಾತನಾಡಿದರು.

ಶಾಲಾ ಸಂಸತ್ತಿಗೆ ಆಯ್ಕೆಯಾದ ಮಕ್ಕಳಿಗೆ ಅಧಿಕಾರದ ಗೌಪ್ಯತೆ ಮತ್ತು ಪ್ರಮಾಣ ವಚನವನ್ನು ಮುಖ್ಯಗುರುಮಾತೆ ಎಮ್.ಪಿ.ಬುಕ್ಕಾ ಅವರು ಭೋದಿಸಿದರು. ವೈಭವ ಬಾಗಲಕೋಟ, ಶ್ರೀರಕ್ಷಾ ಬಿರಾದಾರ, ಮಲ್ಲನಗೌಡ ಸೋಮಜಾಳ, ಕೃತಿ ದೇಶಮುಖ ವಿದ್ಯಾನಿಕೇತನ ಮತ್ತು ಪ್ರೇರಣಾ ಪ್ರಾಥಮಿಕ ಶಾಲೆಗಳ ಪ್ರಧಾನ ಕಾರ್ಯದರ್ಶಿಗಳಾಗಿ ಅಧಿಕಾರ ಸ್ವೀಕರಿಸಿದರು. ವಿದ್ಯಾನಿಕೇತನ ಮತ್ತು ಪ್ರೇರಣಾ ಪ್ರಾಥಮಿಕ ಶಾಲೆಗಳ ಪಾಲಕ ಪ್ರತಿನಿಧಿಗಳಾಗಿ ಆಯ್ಕೆಯಾದ ಲಕ್ಷ್ಮಿ ಗುಗ್ಗರಿ ಮತ್ತು ರಾಘವೇಂದ್ರ ಹಾದಿಮನಿ ಸೇರಿದಂತೆ ಚಾಲಕರು ಮತ್ತು ಆಯಾಗಳಿಗೆ ಗೌರವಿಸಿ ಸನ್ಮಾನಿಸಲಾಯಿತು.




ಇದೇ ಸಂದರ್ಭದಲ್ಲಿ ನ್ಯೂ ಎರಾ ಪ್ರಾಥಮಿಕ ಶಾಲೆಯ ಮುಖ್ಯಗುರುಮಾತೆ ಲೀಲಾ ನಾಯಕ, ಬೋಧಕ ಸಿಬ್ಬಂದಿಗಳಾದ ಸತೀಶ ಕುಲಕರ್ಣಿ, ಕಿರಣ ಕುಲಕರ್ಣಿ, ಸನತ ಕುಲಕರ್ಣಿ, ಅಲ್ತಾಫ ತಾಂಬೋಳಿ, ಅಕ್ಷಯ ಯಲಗಟ್ಟಿ, ಶ್ರೀಕಾಂತ ಹೂನಳ್ಳಿ, ಎಸ್.ಬಿ.ಕುಂಟೋಜಿ, ಸಂತೋಷ ನಾಯಕ, ಎಸ್.ಎಸ್.ಯಂಕಂಚಿ, ಎಮ್.ಎಮ್.ಜುಮನಾಳ, ಬಿ.ಎಸ್.ಪಾಟೀಲ, ಎಸ್‌ವ್ಹಿ.ಕಡಣಿ, ಎಮ್.ಜಿ.ದ್ಯಾಮಗೊಂಡ, ವಿ.ಎ.ನಾಯಕ, ಎಸ್.ಡಿ. ನಾಯಕ, ವಿಜಯಲಕ್ಷ್ಮಿ ಅಲಾಳಮಠ, ಸಾವಿತ್ರಿ ವೀರಾಪೂರ, ಕುಮಾರಿ ಎನ್.ಜಿ.ಬಳಗಾನೂರ, ಆರ್.ಎಮ್.ಫಕೀರಪುರ, ಆರ್.ಎಸ್.ಶಿವಸಿಂಪಿಗೇರ, ಎಸ್.ಎಸ್.ಪಾಟೀಲ, ಜಿ.ಎಸ್.ಯಂಕಂಚಿ ಸೇರಿದಂತೆ ಬೋಧಕ–ಬೋಧಕೇತರ ಸಿಬ್ಬಂದಿಗಳು ಇದ್ದರು. ಅದಿತಿ ಪಾಟೀಲ ಪ್ರಾರ್ಥಿಸಿದರು.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR